MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 279 | ಶುಕ್ರವಾರ : 22-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 279 | FRIDAY : 22-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣ; ರೈತರ ಅಪೇಕ್ಷೆ ಈಡೇರಿಸುವ ವಿಷಯ ಪ್ರಸ್ತಾಪಿಸಿದ ಶಾಸಕ ಬಸನಗೌಡ ದದ್ದಲ್

ಯುವ ಮಾರ್ಗ ಸುದ್ದಿ

**ರಾಯಚೂರು,ಆ.21–** ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣ ಕಾಮಗಾರಿ, ಕಾಲುವೆಗೆ ನೀರು ಹರಿಸುವುದು, ಭೂಸ್ವಾಧೀನ ಪಡಿಸಿಕೊಂಡ ರೈತರಿಗೆ ಪರಿಹಾರ ಧನ ವಿತರಣೆ ಸೇರಿದಂತೆ ರೈತರ ಅಪೇಕ್ಷೆಯ ವಿಷಯವನ್ನು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಆಗಸ್ಟ್ 20ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿದರು.

95 ಕಿ.ಮೀಟರ್‌ನಿಂದ 168ರವರೆಗೆ ನಿರ್ಮಾಣ ಹಂತದಲ್ಲಿರುವ 2ನೇ ಹಂತದ ಕಾಮಗಾರಿ ಯಾವ ಹಂತದಲ್ಲಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಕಾಲಮಿತಿ ನಿಗದಿಪಡಿಸಲಾಗಿದೆ. ಈಗಾಗಲೇ ನಿರ್ಮಾಣಗೊಂಡ ಕಾಲುವೆಗಳಲ್ಲಿ ಯಾವ ಕಾಲಿಮಿತಿಯಲ್ಲಿ ನೀರು ಹರಿಸಿ ರೈತರ ಭೂಮಿಗೆ ಪೂರೈಸಲಾಗುತ್ತದೆ. ಈ ಕಾಲುವೆ ಕಾಮಗಾರಿಗೆ ಭೂಸ್ವಾಧಿನಪಡಿಸಿಕೊಂಡ ಎಷ್ಟು ರೈತರಿಗೆ ಪರಿಹಾರ ಧನ ನೀಡಲಾಗಿದೆ ಎಂಬುದರ ವಿಷಯದ



ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1483ರ ಬಗ್ಗೆ ಶಾಸಕರು ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕಮಾರ ಅವರು, ನಾರಾಯಣಪುರ ಬಲದಂಡೆ ಕಾಲುವೆಗೆ ಭೂಮಿ ನೀಡಿದ ರೈತರ ಪೈಕಿ 615 ರೈತರಿಗೆ 17.80 ಕೋಟಿ ರೂ. ಪರಿಹಾರ ವಿತರಿಸುವುದು ಬಾಕಿ ಇದ್ದು, ಭೂಮಾಲೀಕರು ಅಗತ್ಯ ಮತ್ತು ಪೂರಕ ದಾಖಲೆಗಳನ್ನು ಸಲ್ಲಿಸಿದ ನಂತರ ಪರಿಹಾರ ಧನ ಪಾವತಿಸಲಾಗುವುದು. ಈ ನಾರಾಯಣಪುರ ಬಲದಂಡೆ ಕಾಲುವೆಯ ವಿತರಣಾ ಕಾಲವೆ ಒಳಗೊಂಡಂತೆ ಕಿ.ಮೀ 95 ರಿಂದ 168ರವರೆಗಿನ ಕಾಲುವೆ ಜಾಲದ ಕಾಮಗಾರಿಗಳಿಗೆ 2125 ರೈತರಿಂದ 2701 ಎಕರೆ 10 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಪೈಕಿ 1,510 ರೈತರಿಗೆ ರೂ.174.16 ಕೋಟಿ ಮೊತ್ತದಷ್ಟು ಇಲ್ಲಿಯವರೆಗೆಲ ಪರಿಹಾರ ಧನ ವಿತರಿಸಲಾಗಿದೆ ಎಂದು ತಿಳಿಸಿದರು.

ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ 95 ಕಿ.ಮೀಟರ್‌ನಿಂದ 168 ರವರೆಗಿನ 73 ಕಿ.ಮೀ.ವರೆಗಿನ ಕಾಮಗಾರಿಯು ಕೃಷ್ಣ ಮೇಲ್ದಂಡೆ ಯೋಜನೆ ಹಂತ 3ರಡಿ ಒಂದು ಉಪ ಯೋಜನೆಯಾಗಿದ್ದು, ಈ ಯೋಜನೆಯಡಿ ದೇವದುರ್ಗ ಮತ್ತು ರಾಯಚೂರು ತಾಲ್ಲೂಕಿನಡಿ 61,747 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿದೆ.

ಮುಖ್ಯ ಕಾಲುವೆಗೆ ಸಂಬಂಧಿಸಿದಂತೆ ಉದ್ದ 73 ಕಿ.ಮೀ.ಗಳಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಿ.ಮೀ 145.00 ರಿಂದ 155.00 ಹೊರತುಪಡಿಸಿ ಬಾಕಿ ಜೈನೇಜ್‌ಗಳಲ್ಲಿ ಕಾಮಗಾರಿ ಪೂರ್ಣಗೊಂಡಿರುತ್ತದೆ. ಈ ಪೈಕಿ 800 ಮೀಟರ್ ಆರ್.ಸಿ.ಸಿ. ಅಕ್ವಡಕ್ಟ್ ನಿರ್ಮಾಣ ಕಾಮಗಾರಿಯು (153.040 ಕಿ.ಮೀಟರ್ ದಿಂದ 153.840ವರೆಗೆ) ಬಾಕಿ ಇರುತ್ತದೆ. ಈ ಬಾಕಿ ಇರುವ ಅಕ್ವಡಕ್ಟ್ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆಯಲಾಗಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆ ಹಂತದಲ್ಲಿದೆ.(2ನೇಪುಟ)

## ಸದನ ಸಮಿತಿಗೆ ವಿಧೇಯಕ

**ಬೆಂಗಳೂರು, ಆ. 21–** ರಾಜ್ಯ ಸರ್ಕಾರ ಜಾರಿ ಮಾಡಲು ಮುಂದಾಗಿರುವ ಕರ್ನಾಟಕ ಜನಸಂದಣಿ ನಿಯಂತ್ರಣ ವಿಧೇಯಕ ಜನ ವಿರೋಧಿಯಾಗಿದೆ, ಹೋರಾಟಗಳನ್ನು ಹತ್ತಿಕ್ಕುವ ವಿಧೇಯಕ. ಈ ವಿಧೇಯಕ ಜಾರಿ ಬೇಡ, ವಿಧೇಯಕದಲ್ಲಿರುವ ಕೆಲ ಅಂಶಗಳು ದುರ್ಬಳಕೆಯಾಗುವ ಸಾಧ್ಯತೆ ಇದೆ. ವಿಧೇಯಕದಲ್ಲಿ ಕೆಲ ಗೊಂದಲಗಳಿದ್ದು, ಆ ಬಗ್ಗೆ ಸ್ಪಷ್ಟನೆ ಬೇಕಿದೆ. ಹಾಗಾಗಿ ಈ ವಿಧೇಯಕವನ್ನು ಪರಿಶೀಲನೆಗಾಗಿ ಸದನ ಸಮಿತಿಗೆ ಒಪ್ಪಿಸಿ ಎಂಬ ಪ್ರತಿಪಕ್ಷಗಳ ಆಗ್ರಹಕ್ಕೆ ಸರ್ಕಾರ ಮಣಿದು ಜನಸಂದಣಿ ನಿಯಂತ್ರಣ ವಿಧೇಯಕವನ್ನು ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಲು ಸಮ್ಮತಿಸಿತು.

ಜನಸಂದಣಿ ನಿಯಂತ್ರಣ ವಿಧೇಯಕವನ್ನು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸದನದಲ್ಲಿ ಮಂಡಿಸಿ, ವಿಧೇಯಕದಲ್ಲಿ ರಾಜಕೀಯ ಸಭೆ ಸೇರಿದಂತೆ ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಅವಘಡಗಳಾದರೆ ಅದಕ್ಕೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಅಂಶಗಳನ್ನು ಪ್ರಸ್ತಾಪಿಸಿದರು. ಆಗ ಪ್ರತಿಪಕ್ಷಗಳ ಬಹುತೇಕ ಸದಸ್ಯರು ಎದ್ದುನಿಂತು ಈ ವಿಧೇಯಕ ಜನವಿರೋಧಿ, ಹೋರಾಟ ಹತ್ತಿಕ್ಕುವ ಸಲುವಾಗಿಯೇ



ವಿಧೇಯಕವನ್ನು ಸರ್ಕಾರ ತರಲು ಹೊರಟಿದೆ. ವಿಧೇಯಕದ ಬಗ್ಗೆ ಹಲವು ಸ್ಪಷ್ಟನೆಗಳು ಬೇಕಿದೆ. ತಕ್ಷಣಕ್ಕೆ ಈ ವಿಧೇಯಕ ಜಾರಿ ಮಾಡುವುದು ಬೇಡ, ಸದನ ಸಮಿತಿ ವಹಿಸಿ, ಮುಂದಿನ ಅಧಿವೇಶನದಲ್ಲಿ ವಿಧೇಯಕದ ಬಗ್ಗೆ ಚರ್ಚೆ ನಡೆಸಿ ತೀರ್ಮಾನ ಮಾಡೋಣ ಎಂದು ಪಟ್ಟು ಹಿಡಿದ್ದಿದ್ದು ಸದನದಲ್ಲಿ ಕಾವೇರಿದ ವಾತಾವರಣ ಸೃಷ್ಟಿಯಾಗಲು ಕಾರಣವಾಯಿತು.

ಪ್ರತಿಪಕ್ಷಗಳ ಆಗ್ರಹ, ಒತ್ತಡಕ್ಕೆ ಮಣಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಈ ಜನಸಂದಣಿ ನಿಯಂತ್ರಣ ವಿಧೇಯಕ ಜಾರಿ ಅವಶ್ಯವಿದೆ. ಆದರೆ ಪ್ರತಿಪಕ್ಷಗಳು ಸದನ ಸಮಿತಿಗೆ ಒಪ್ಪಿಸುವಂತೆ ಒತ್ತಾಯಿಸುತ್ತಿವೆ. ಹಾಗೆಯೇ ಆಗಲಿ, ಸದನ ಸಮಿತಿ ಮಾಡೋಣ ಎಂದು ಹೇಳಿದಾಗ ಪ್ರತಿಪಕ್ಷ ಸದಸ್ಯರು ಮೇಜುಕುಟ್ಟಿ ಹರ್ಷ ವ್ಯಕ್ತಪಡಿಸಿದರು.

ಈ ಜನಸಂದಣಿ ನಿಯಂತ್ರಣ ವಿಧೇಯಕ ಈಗಿನಿಂದಲೇ ಜಾರಿ ಮಾಡಬೇಕು ಎನ್ನುವ ಸರ್ಕಾರದ ಆಶಯಕ್ಕೆ ಸ್ವಲ್ಪ ಹಿನ್ನಡೆಯಾಗಿದ್ದು, ಸದನ ಸಮಿತಿ ಪರಿಶೀಲನೆ ನಂತರ ಮುಂದಿನ ಅಧಿವೇಶನದಲ್ಲಿ ಈ ವಿಧೇಯಕ ಚರ್ಚೆಗೆ ಬರುವ (2ನೇಪುಟಕ್ಕೆ)

## ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳುವವನೆ ನಿಜವಾದ ಸಾಧಕ : ಮುರುಘೇಂದ್ರ ಶ್ರೀ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಆ.21–**ಜೀವನದಲ್ಲಿ ಅವಕಾಶಗಳು ಪದೇ ಪದೇ ಸಿಗುವುದಿಲ್ಲ. ಸಿಕ್ಕ ಅವಕಾಶಗಳನ್ನು ಸಮಯಕ್ಕೆ ಸರಿಯಾಗಿ ಸದ್ಬಳಕೆ ಮಡಿಕೊಂಡು ಜೀವನ ವನ್ನು ರೂಪಿಸಿಕೊಳ್ಳುವನೇ ನಿಜವಾದ ಸಾಧಕ. ಜೀವನದಲ್ಲಿ ಅವಕಾಶ ಸಿಕ್ಕಾಗ ಬಳಸಿಕೊಂಡು ಮುನ್ನುಗ್ಗುವವನೆ ಅದೃಷ್ಟವಂತ ವ್ಯಕ್ತಿ ಎಂದು ಯರಡೋಣಾ ಕ್ರಾಸನ ಶ್ರೀ ಗುರುಸಿದ್ದರಾಮೇಶ್ವರ ಮಠದ ಶ್ರೀಮುರುಘೇಂದ್ರ ಶಿವಯೋಗಿಗಳು ಹೇಳಿದರು.

ಪಟ್ಟಣದ ಸಮೀಪದ ಕರಡಕಲನ ಶ್ರೀ ಉಮಾಮಹೇಶ್ವರಿ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡ ಶ್ರೀಗಳ ಪಾದಪೂಜೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ನಿರಂತರ ಪರಿಶ್ರಮದಿಂದಷ್ಟೇ ಸಾಧನೆ ಮಾಡಲು ಸಾಧ್ಯ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ

ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು.ಆದರೆ ಇತ್ತೀಚಿಗೆ ವಿದ್ಯಾರ್ಥಿಗಳಲ್ಲಿ ಗುರು– ಹಿರಿಯರನ್ನು ಕಂಡರೆ ಪೂಜ್ಯನಿಯ ಭಾವನೆ ಕಡಿಕೆ




ಆಗುತ್ತಿದೆ,ಇದು ಆಗಬಾರದು ಹಿರಿಯರನ್ನು ಗೌರವದಿಂದ ಕಾಣಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತೆಳಿದರು.

ಈ ಶಿಕ್ಷಣ ಸಂಸ್ಥೆ ಕಡಿಮೆ ಅವಧಿಯಲ್ಲಿ ಹೆಚ್ಚು ಸಾಧನೆ ಮಾಡಿ ತೋರಿಸಿದ ಸಂಸ್ಥೆ, ಇಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಿ ನಿಮ್ಮನ್ನು ಉತ್ತಮ ನಾಗರಿಕರನ್ನಾಗಿ ಮಾಡುತ್ತದೆ.ಇಲ್ಲಿ ಕಲಿತ ಸಾಕಷ್ಟು ವಿದ್ಯಾರ್ಥಿಗಳು ಇಂದು ದೇಶದ ಪ್ರತಿಷ್ಠಿತ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅದ್ಯಯನ ಮಾಡುತ್ತಿದ್ದಾರೆ.ಇನ್ನೂ ಚಿಕ್ಕ ವಯಸ್ಸಿನಲ್ಲಿ ಸಾವಿರಾರು ಮಕ್ಕಳ ಭವಿಷ್ಯ ರೂಪಿಸುವಲ್ಲಿ ಕಾರಣರರಾದ ಸಂಸ್ಥೆಯ ಕಾರ್ಯದರ್ಶಿ ವಿನಯಕುಮಾರ ಗಣಾಚಾರಿ ಇವರ ಕಾರ್ಯ ಶ್ಲಾಘನೀಯ ಎಂದು ಹೇಳಿದರು

ಕಾಲೇಜು ಪ್ರಾಚಾರ್ಯ ಜಿ.ವಿ.ಸುರೇಶ ಶ್ರೀಗಳ ಪಾದಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಶರಣಬಸವ ಗಣಾಚಾರಿ, ಕಾರ್ಯದರ್ಶಿ ವಿನಯಕುಮಾರ ಗಣಾಚಾರಿ, ಉಪನ್ಯಾಸಕ ಎಲ್.ಸಾಗರ, ಎಸ್.ಕೆ.ಜಾನಿ,ಸಾಯಿಕಿರಣ, ಎನ್. ಶ್ರೀನಿವಾಸರಾಂ, ಸಂಗಯ್ಯ ಸಿಂದಗಿಮಠ, ಬಸನಗೌಡ ಗೌಡರ, ಬಸವರಾಜ ತಿಳಿಮಠ, ಗದ್ದೆಪ್ಪ, ವೀರೇಶ ಹೂಗಾರ ಸೇರಿ ಮತ್ತೀತರರು ಇದ್ದರು.

## ಹತ್ತಿ ಬೆಳೆ ನಿರ್ವಹಣೆ ಕುರಿತು ರೈತರಿಗೆ ಜಾಗೃತಿ ಕಾರ್ಯಕ್ರಮ




ಯುವ ಮಾರ್ಗ ಸುದ್ದಿ

**ಮಾನ್ವಿ,ಆ.21–**ತಾಲೂಕಿನ ಕುರ್ಡಿ ಗ್ರಾಮದ ವ್ಯಾಪ್ತಿಯಲ್ಲಿನ ರೈತರ ಜಮೀನಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ , ಮೈಸೂರಿನ ಸಹಜ ಸಮೃದ್ಧಿ ಸಂಸ್ಥೆ, ಎಲ್.ಡಿ.ಸಿ. ಕಂಪನಿ ಬೆಂಗಳೂರು, ದೇವಧಾನ್ಯ ರೈತ ಉತ್ಪಾದಕ ಕಂಪನಿ ಧಾರವಾಡ ಸಂಯುಕ್ತಾಶ್ರಯದಲ್ಲಿ ನಡೆದ ಹತ್ತಿಬೆಳೆಯಲ್ಲಿ ಸುಧಾರಿತ ಅತಿಸಾಂಧ್ರ ಬೆಳೆ ಪದ್ದತಿ ಹಾಗೂ ಹತ್ತಿ ಬೆಳೆ ನಿರ್ವಹಣೆ ಕುರಿತು ರೈತರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಸಂಶೋಧನ ನಿರ್ದೇಶಕರಾದ ಡಾ. ಜೆ.ಪಿ. ನಿಡಗುಂದಿ ಮಾತನಾಡಿ ರೈತರಿಗೆ ಹೆಚ್ಚಿನ ಅದಾಯ ತರುವ ಬೆಳೆಗಳಲ್ಲಿ ಹತ್ತಿ ಬೆಳೆ ಪ್ರಮುಖವಾಗಿದ್ದು ಹತ್ತಿ ಬೆಳೆಯಲ್ಲಿ ಹೆಚ್ಚಿನ ಅದಾಯ ಇಳುವರಿಯನ್ನು ಪಡೆಯುವುದಕ್ಕೆ ಅಗತ್ಯ ಕೃಷಿ ತಾಂತ್ರಿಕತೆಯನ್ನು ರೈತರು ಆಳವಡಿಸಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ. ರೈತರು ಇತ್ತೀಚಿನ ಹತ್ತಿ ಬೆಳೆಯ ತಾಂತ್ರಿಕತೆಯಾದ ಅತಿಸಾಂದ್ರಿತ ಹತ್ತಿ ಬೇಳೆ ಪದ್ದತಿಗೆ ಸೂಕ್ತವಾದ ಹತ್ತಿ ಬೀಜಗಳನ್ನು ಬಿತ್ತನೆ ಮಾಡಿ ಬೆಳೆ ನಿಯಂತ್ರಣ ಸೇರಿದಂತೆ ಅಗತ್ಯ ಕೃಷಿ ಕೈಗೊಂಡಲ್ಲಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕೀಟಶಾಸ್ತ್ರ ವಿಜ್ಞಾನಿ ಡಾ. ಶ್ರೀವಾಣಿ ಮಾತನಾಡಿ ಹತ್ತಿ ಬೆಳೆಯಲ್ಲಿ ಹಸಿರು ಕಾಯಿಕೊರಕ ಸೇರಿದಂತೆ ಇತರ ಕೀಟಗಳನ್ನು ನಿಯಂತ್ರಿಸುವುದಕ್ಕೆ ಬಿಟಿ ತಂತ್ರಜ್ಞಾನವನ್ನು ಹತ್ತಿ ಬೀಜದಲ್ಲಿ ಆಳವಡಿಸಿದ ನಂತರ ಹತ್ತಿಯಲ್ಲಿ ಹಸಿರು (2ನೇಪುಟಕ್ಕೆ)

## ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವತಿಯಿಂದ ಪಾರ್ಥೇನಿಯಂ ನಿರ್ಮೂಲನಾ ಸಪ್ತಾಹ

ಯುವ ಮಾರ್ಗ ಸುದ್ದಿ

**ಮಾನ್ವಿ,ಆ.21–**ತಾಲೂಕಿನ ಕುರ್ಡಿ ಗ್ರಾಮದ ವ್ಯಾಪ್ತಿಯಲ್ಲಿನ ರೈತರ ಜಮೀನಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಐ.ಸಿ.ಎ.ಆರ್– ಕೃಷಿ ವಿಜ್ಞಾನ ಕೇಂದ್ರ ರಾಯಚೂರು ವತಿಯಿಂದ ನಡೆದ ಪಾರ್ಥೇನಿಯಂ ನಿರ್ಮೂಲನಾ ಸಪ್ತಾಹ ಕಾರ್ಯಕ್ರಮದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ. ತಿಮ್ಮಣ್ಣನಾಯಕ, ಮಾತನಾಡಿ ರೈತರ ಜಮೀನಿನಲ್ಲಿ ಕಳೆ ಬೆಳೆಯಾಗಿ ಬೆಳೆಯುವ ಪಾರ್ಥೇನಿಯಂ ಸಸ್ಯವು ರೈತರಿಗೆ ಹಾನಿ ಮಾಡುವ ಎಲ್ಲಾ ಕೀಟ ಪ್ರಭೇದಗಳಿಗೆ ಆಶ್ರಯ ನೀಡುವ ಮೂಲಕ ರೈತರ ಬೆಳೆಗಳಲ್ಲಿ ಕೀಟಗಳು ಹರಡುವುದಕ್ಕೆ ಕಾರಣವಾಗುತ್ತವೆ ಹಾಗೂ ಮಾನವರುಪಾರ್ಥೇನಿಯಂ ಸಸ್ಯವನ್ನು ಸ್ಪರ್ಷ ಮಾಡಿದಾಗ ಮಾನವರಲ್ಲಿ ಅಲರ್ಜಿಗೆ




ಕಾರಣವಾಗುತ್ತದೆ ಅದ್ದರಿಂದ ರೈತರು ತಮ್ಮ ಜಮೀನಿನಲ್ಲಿ ಬೆಳೆಯುವ ಪಾರ್ಥೇನಿಯಂ ಕಳೆಯನ್ನು ನಿರ್ಮೂಲನೆ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಸಂಶೋಧನ ನಿರ್ದೇಶಕರಾದ ಡಾ. ಜೆ.ಪಿ. ನಿಡಗುಂದಿ.ಕೀಟಶಾಸ್ತ್ರ ವಿಜ್ಞಾನಿ ಡಾ. ಶ್ರೀವಾಣಿ. ಮೈಸೂರಿನ ಸಹಜ ಸಮೃದ್ಧಿ ಸಂಸ್ಥೆಯ ನಿರ್ದೇಶಕರಾದ ಕೃಷ್ಣ ಪ್ರಸಾದ. ಎಲ್.ಡಿ.ಸಿ. ಕಂಪನಿಯ ಕೃಷಿ ಸಂಶೋಧನ ವಿಭಾಗದ ವಿಶ್ಲೇಷಕರಾದ ಗಿರೀಶ್, ಕೃಷಿ ವಿಜ್ಞಾನಿಗಳಾದ,ಡಾ.ಮಲ್ಲರೆಡ್ಡಿ, ಕುರ್ಡಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಡಾ.ಶಿವಶಂಕರ , ರಾಶಿ ಬೀಜ ಉತ್ಪಾದಕ ಸಂಸ್ಥೆಯ ಮುಖ್ಯಸ್ಥರಾದ ಉದಯಕುಮಾರ, ಎಲ್.ಡಿ.ಸಿ. ಕಂಪನಿಯ ಸುಸ್ಥಿರ ಕೃಷಿ ವ್ಯವಸ್ಥಾಪಕರಾದ ಅರುಣಕುಮಾರ, ಬಾಯರ್ ಕ್ರಾಪ್ ಸೈನ್ಸ್ ಸಂಸ್ಥೆಯ ಮುಖ್ಯಸ್ಥರಾದ ಶಂಭಣ್ಣ ಆದಿಮನಿ, ವನಮಾಲಮ್ಮ,ಈಶಮ್ಮ ಸೇರಿದಂತೆ ಗ್ರಾಮದ ನೂರಾರು ರೈತರು ಭಾಗವಹಿಸಿದರು.

## ರಾಯಚೂರು ಸಿಟಿಯಲ್ಲಿ ಮುಂದುವರೆದ ಸ್ವಚ್ಛತಾ ಕಾರ್ಯ

ಯುವ ಮಾರ್ಗ ಸುದ್ದಿ

**ರಾಯಚೂರು,ಆ.21–**ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಅವರ ನಿರ್ದೇಶನದ ಮೇರೆಗೆ ರಾಯಚೂರು ಸಿಟಿಯ ಸ್ವಚ್ಛತಾ ಕಾರ್ಯ ಗುರುವಾರ ಮುಂದುರೆಯಿತು.

ಬೆಳಿಗ್ಗೆ 5 ಗಂಟೆಗೆ ಆರಂಭಗೊಂಡ ಈ ಕ್ಷಿಪ್ರ ಕಾರ್ಯಾಚರಣೆಯು ಸಂಜೆ 5 ಗಂಟೆವರೆಗೆ ನಡೆಯಿತು.

ಈ ಕ್ಷಿಪ್ರ ಕಾರ್ಯಾಚರಣೆಯಲ್ಲಿ 60 ಅಡಿ ಉದ್ದದ ಬೃಹತ್ ಹಿಟಾಚಿ ಬಳಸಿ ಖಾಸ್ಬಾಬಿಯನ್ನು ಶುದ್ಧೀಕರಿಸಲಾಯಿತು.

ಈ ವರ್ಷದ ಆರಂಭದಲ್ಲಿ ಮಾವಿನಕೆರೆ ಮತ್ತು ಕಂದಕವನ್ನು ಸ್ವಚ್ಛಗೊಳಿಸುವಲ್ಲಿ ಪಾಲಿಕೆಯು ಇದೆ ಹಿಟಾಚಿಯನ್ನು ಬಳಸಿತ್ತು. ಆಯುಕ್ತರಾದ ಜುಬಿನ್ ಅವರು, ಕೆಲ ಕಡೆ ಭೇಟಿ ನೀಡಿ ಯಂತ್ರಗಳಿಂದ ನಡೆದ ಶುಚಿತ್ವ ಕಾರ್ಯವನ್ನು ಖುದ್ದು ಪರಿಶೀಲಿಸಿದರು. ನಗರದ ಎಲ್ಲಾ ಪ್ರಮುಖ ನೀರಿನ ಮೂಲಗಳನ್ನು ಸಂರಕ್ಷಿಸಬೇಕು.



ಕೆರೆ, ಕಟ್ಟೆ, ಭಾವಿ, ಗಟಾರುಗಳನ್ನು ಪ್ಲಾಸ್ಟಿಕ್ ಮತ್ತು ಹೂಳು ಮುಕ್ತವಾಗಿಸಬೇಕು. ಗಣೇಶ ಪೂಜೆ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯು ಸ್ವಚ್ಛತಾ ಕಾರ್ಯಗಳನ್ನು ಚುರುಕುಗೊಳಿಸಬೇಕು ಎಂಬುದು ರಾಯಚೂರ ಸಿಟಿ ಜನತೆಯ ಅಪೇಕ್ಷೆಯಾಗಿದೆ.

ಜನರ ಬಯಕೆಯಂತೆ ಕಾರ್ಯಗಳು ತ್ವರಿತಗತಿಯಲ್ಲಿ ಆಗಬೇಕು. ನಗರದ ಸೌಂದರ್ಯೀಕರಣ ಹಿನ್ನೆಲೆಯಲ್ಲಿ ಪಾಲಿಕೆ ನಡೆಸುತ್ತಿರುವ ನಾನಾ ಕಾರ್ಯಗಳ ಪ್ರಯತ್ನದ ಮುಂದುವರಿಕೆಯಾದ ಈ ಸ್ವಚ್ಛತಾ ಕಾರ್ಯಾಚರಣೆ ಯಶ ಕಾಣಲು ಪಾಲಿಕೆಯ ಎಲ್ಲ ಅಭಿಯಂತರರು, ಅಧಿಕಾರಿಗಳು ಮತ್ತು ಸಿಬ್ಬಂದಿ ಶಿಸ್ತಿನಿಂದ ಕಾರ್ಯತತ್ಪರರಾಗಬೇಕು ಎಂದು ಇದೆ ವೇಳೆ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ನಿರ್ದೇಶನ ನೀಡಿದರು.

ಆಯಕ್ತರ ಸಮ್ಮುಖದಲ್ಲಿ ಶುಚಿತ್ವ ಕಾರ್ಯಾಚರಣೆ ಮುಂದುವರೆಯಿತು. ಉಪ ಆಯುಕ್ತರಾದ ಸಂತೋಷ ರಾಣಿ ಹಾಗೂ ಇನ್ನಿತರ ಅಧಿಕಾರಿಗಳು ಇದ್ದರು.

ಯುವ ಮಾರ್ಗ

ಶುಕ್ರವಾರ : 22-08-2025

## ಮೊದಲನೇಯ ಪುಟದಿಂದ

### ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣ; ರೈತರ ಅಪೇಕ್ಷೆ ಈಡೇರಿಸುವ ವಿಷಯ ಪ್ರಸ್ತಾಪಿಸಿದ ಶಾಸಕ ಬಸನಗೌಡ ದದ್ದಲ್

ವಿತರಣಾ ಕಾಲುವೆ ಜಾಲಕ್ಕೆ ಸಂಬಂಧಿಸಿದಂತೆ ಈ ಕಾಲುವೆಯಡಿ ಬರುವ ವಿತರಣಾ ಕಾಲುವೆ ಸಂಖ್ಯೆ 18ಎ ರಿಂದ 42 ವರೆಗಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿವಿಧ ಹಂತಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಈ ಪೈಕಿ ವಿತರಣಾ ಕಾಲುವೆ ಸಂ.31 ರ ಕಾಮಗಾರಿಯನ್ನು (ಬೋಳಮಾನದೊಡ್ಡಿ ಏತ ನೀರಾವರಿ ಒಳಗೊಂಡಂತೆ) ಕೈಗೆತ್ತಿಕೊಳ್ಳಲು ಡಿಪಿಆರ್ ತಯಾರಿಸಲು ಸಮಾಲೋಚಕರನ್ನು ನೇಮಿಸಲು ಕ್ರಮ ವಹಿಸಲಾಗುತ್ತಿದೆ.

ಈ ಕಾಲುವೆ ಜಾಲದಡಿ ಪೂರ್ಣಗೊಂಡ ಕಾಮಗಾರಿಗಳಡಿ 17,805 ಹೆಕ್ಟೇರ್ ನೀರಾವರಿ ಕ್ಷೇತ್ರವನ್ನು ಸೃಜಿಸಲಾಗಿದೆ. ಅದೆ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳಡಿ 27,123 ಹೆಕ್ಟೇರ್ ನೀರಾವರಿ ಕ್ಷೇತ್ರ ಬರಲಿದೆ. ಬಾಕಿ ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳಡಿ 16,819 ನೀರಾವರಿ ಕ್ಷೇತ್ರ ಬರಲಿದೆ.

ಕೃಷ್ಣ ಜಲವಿವಾದ ನ್ಯಾಯಾಧೀಕರಣ-2ರ ತೀರ್ಪಿನನ್ವಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅನುಷ್ಠಾನಕ್ಕಾಗಿ ಹಂಚಿಕೆಯಾದ ನೀರಿನ ಪ್ರವಾಣ 130.00 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆಗೊಂಡಿರುವುದಿಲ್ಲ. ಅಧಿಸೂಚನೆಗೊಂಡ ನಂತರ ಕಾಲುವೆ ಜಾಲದಲ್ಲಿ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ವಿವರವಾದ ಲಿಖಿತ ಉತ್ತರವನ್ನು ಶಾಸಕರಾದ ಬಸನಗೌಡ ದದ್ದಲ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಒದಗಿಸಲಾಗಿದೆ ಎಂದು ಇದೆ ವೇಳೆ ಉಪ ಮುಖ್ಯಮಂತ್ರಿಗಳು ಪ್ರತಿಕ್ರಿಯಿಸಿದರು.

## ಹತ್ತಿ ಬೆಳೆ ನಿರ್ವಹಣೆ ಕುರಿತು ರೈತರಿಗೆ ಜಾಗೃತಿ ಕಾರ್ಯಕ್ರಮ

ಕಾಯಿಕೊರಕ ಕೀಟದ ಸಮಸ್ಯೆ ನಿವಾರಣೆಯಾಗಿ ಈಗ ಗುಲಾಬಿ ಕಾಯಿಕೋರಕ ಕೀಟದ ಸಮಸ್ಯೆ ಹೆಚ್ಚಾಗಿ ರೈತರು ಗುಣಮಟ್ಟದ ಹತ್ತಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಗುಲಾಬಿ ಕಾಯಿಕೋರಕ ಕೀಟ ಅಕ್ಟೋಬರ್ ನಿಂದ ನವಂಬರ್ ತಿಂಗಳಲ್ಲಿ ಹೆಚ್ಚಾಗುವುದರಿಂದ ಹತ್ತಿಯನ್ನು ಹೆಚ್ಚಿನ ರೈತರು ಜೂನ್ ತಿಂಗಳಲ್ಲಿ ಬೀತ್ತನೆ ಮಾಡುವುದರಿಂದ ಹಾಗೂ ಗುಲಾಬಿ ಕಾಯಿಕೋರಕದ ಸಮಗ್ರ ನಿರ್ವಹಣೆ ಕ್ರಮಗಳಾದ ಗಂಡು ಪತಂಗಗಳನ್ನು ಆಕರ್ಷಿಸುವುದಕ್ಕೆ ಮೋಹಕ ಬಲೆಗಳನ್ನು ಹಾಕುವುದು,ಕ್ರಾಮೀಟ್ ಪೇಸ್ಟ್ ಹತ್ತಿ ಗಿಡದ ರೆಂಬೆಗಳಿಗೆ ಹಚ್ಚುವುದರಿಂದ ಗುಲಾಬಿ ಕಾಯಿಕೊರಕದ ಸಂತತಿಯನ್ನು ನಿಯಂತ್ರಿಸಬಹುದು. ಸಮಗ್ರ ಕೀಟನಾಶಕಗಳ ಸಿಂಪರಣೆ ಕೈಗೊಳ್ಳುವುದರಿಂದ ಗುಲಾಬಿ ಕಾಯಿಕೊರಕದ ಬಾದೆಯನ್ನು ಕಡಿಮೆ ಮಾಡಬಹುದು, ಬಿಳಿನೋಣ,ತ್ರಿಪ್ಸಗಳನ್ನು ಕೀಟನಾಶಕ ಬಳಸಿ ನಿವಾರಣೆ ಮಾಡಬಹುದು ಎಂದು ತಿಳಿಸಿದರು.

ಮೈಸೂರಿನ ಸಹಜ ಸಮೃದ್ದಿ ಸಂಸ್ಥೆಯ ನಿರ್ದೇಶಕರಾದ ಕೃಷ್ಣ ಪ್ರಸಾದ ದೇಸಿ ಹತ್ತಿ ಬೀಜಗಳ ತಳಿಗಳ ಬಗ್ಗೆ ಹಾಗೂ ಬಣ್ಣ ಬಣ್ಣದ ಹತ್ತಿ ಬೀಜಗಳ ಕೃಷಿಯ ಬಗ್ಗೆ ತಿಳಿಸಿಕೊಟ್ಟರು.

ಗ್ರಾಮದ ನೂರಾರು ಹತ್ತಿ ಬೆಳೆಯುವ ರೈತರಿಗೆ ಅಗತ್ಯ ಕಿಟ್ ಗಳನ್ನು ಉಚಿತವಾಗಿ ವಿತರಿಸಲಾಯಿತು.

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ. ತಿಮ್ಮಣ್ಣನಾಯಕ, ಎಲ್.ಡಿ.ಸಿ. ಕಂಪನಿಯ ಕೃಷಿ ಸಂಶೋಧನ ವಿಭಾಗದ ವಿಶ್ಲೇಷಕರಾದ ಗಿರೀಶ್, ಕೃಷಿ ವಿಜ್ಞಾನಿಗಳಾದ,ಡಾ.ಮಲ್ಲರೆಡ್ಡಿ, ಕುರ್ಡಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಡಾ.ಶಿವಶಂಕರ , ರಾಶಿ ಬೀಜ ಉತ್ಪಾದಕ ಸಂಸ್ಥೆಯ ಮುಖ್ಯಸ್ಥರಾದ ಉದಯಕುಮಾರ, ಎಲ್.ಡಿ.ಸಿ. ಕಂಪನಿಯ ಸುಸ್ಥಿರ ಕೃಷಿ ವ್ಯವಸ್ಥಾಪಕರಾದ ಅರುಣಕುಮಾರ, ಬಾಯರ್ ಕ್ರಾಪ್ ಸೈನ್ಸ್ ಸಂಸ್ಥೆಯ ಮುಖ್ಯಸ್ಥರಾದ ಶಂಭಣ್ಣ ಆದಿಮನಿ, ವನಮಾಲಮ್ಮ,ಈಶಮ್ಮ ಸೇರಿದಂತೆ ಗ್ರಾಮದ ನೂರಾರು ರೈತರು ಭಾಗವಹಿಸಿದರು.

## ಸದನ ಸಮಿತಿಗೆ ವಿಧೇಯಕ

ಸಾಧ್ಯತೆಗಳಿವೆ.ವಿಧಾನಸಭೆಯಲ್ಲಿ ಸದನ ಆರಂಭವಾಗುತ್ತಿದ್ದಂತೆಯೇ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು 2025ನೇ ಸಾಲಿನ ಕರ್ನಾಟಕ ಜನಸಂದಣಿ ನಿಯಂತ್ರಣ ವಿಧೇಯಕವನ್ನು ಮಂಡಿಸಿ ಈ ವಿಧೇಯಕಕ್ಕೆ ಅಂಗೀಕಾರ ಕೊಡಬೇಕು ಎಂದು ಸದನಕ್ಕೆ ಮನವಿ ಮಾಡಿದರು.

ರಾಜಕೀಯ ಸಭೆ, ದೊಡ್ಡ ಸಮಾರಂಭಗಳ ಸಂದರ್ಭದಲ್ಲಿ ಜನಸಂದಣಿ ಆಗುವುದನ್ನು ಗಮನಿಸಿ ಜನಸಂದಣಿಯನ್ನು ನಿಯಂತ್ರಿಸಲು ನಿಯಂತ್ರಣ ಅಗತ್ಯವೆಂದು ಚಿಂತನೆ ಮಾಡಿ ಈ ವಿಧೇಯಕವನ್ನು ಜಾರಿ ಮಾಡಲು ಸರ್ಕಾರ ಮುಂದಾಗಿದೆ. ಕಾರ್ಯಕ್ರಮಗಳು ಮತ್ತು ಸಮಾರಂಭಗಳಲ್ಲಿ ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದು ಮತ್ತು ಜನ ಗುಂಪುಗೂಡುವುದನ್ನು ನಿರ್ವಹಿಸುವುದು ಮತ್ತು ಕಾನೂನು ಬಾಹಿರವಾಗಿ ಗುಂಪುಗೂಡುವುದನ್ನು ಪ್ರತಿಬಂಧಿಸಲು ಈ ಕಾಯ್ದೆಯನ್ನು ಜಾರಿ ಮಾಡಲಾಗುತ್ತಿದೆ ಎಂದರು.

ಧಾರ್ಮಿಕ, ಕೌಟುಂಬಿಕ ಹಾಗೂ ಶೈಕ್ಷಣಿಕ, ಸರ್ಕಾರಿ ಸಮಾರಂಭಗಳಿಗೆ ಈ ಕಾಯ್ದೆಯಿಂದ ವಿನಾಯ್ತಿ ನೀಡಲಾಗಿದೆ. ಇದನ್ನು ಹೊರತುಪಡಿಸಿ ರಾಜಕೀಯ ಸಭೆ, ಪ್ರತಿಭಟನೆಗಳು ಹಾಗೂ ದೊಡ್ಡ ದೊಡ್ಡ ಸಮಾರಂಭಗಳು ಈ ಕಾಯ್ದೆಯ ವ್ಯಾಪ್ತಿಗೆ ಬರುತ್ತದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿ, ದೊಡ್ಡ ದೊಡ್ಡ ಸಮಾರಂಭ, ರಾಜಕೀಯ ಸಭೆ ನಡೆದ ಸಂದರ್ಭದಲ್ಲಿ ಜೀವಹಾನಿಯಾದರೆ ಸಮಾರಂಭ, ಸಭೆಯ ಆಯೋಜಕರಿಗೆ ಜೀವಾವಧಿ ಸೇರಿದಂತೆ ಜೈಲು ಶಿಕ್ಷೆ, ಜುಲ್ಮಾನೆ ವಿಧಿಸಲು ಈ ಕಾಯ್ದೆಯಲ್ಲಿ ಅವಕಾಶ ಇದೆ ಎಂದು ವಿಧೇಯಕದ ಬಗ್ಗೆ ಸದನಕ್ಕೆ ಮಾಹಿತಿ ನೀಡಿದರು.

ಯಾವುದೇ ಕಾರ್ಯಕ್ರಮ ಅಥವಾ ಸಮಾರಂಭದ ಆಯೋಜನೆಗೂ ಮುನ್ನ 10 ದಿನ ಮೊದಲು ಅನುಮತಿ ಪಡೆಯಬೇಕು. 7 ಸಾವಿರಕ್ಕೂ ಹೆಚ್ಚು ಜನ ಸೇರುವ ಸಮಾರಂಭಗಳಿಗೆ ಅನುಮತಿ ಕಡ್ಡಾಯ. 7 ಸಾವಿರದೊಳಗಿನ ಜನ ಸೇರುವ ಕಾರ್ಯಕ್ರಮಗಳಿಗೆ ಅನುಮತಿ ಬೇಕಿಲ್ಲ. ಸಮಾರಂಭದ ವೇಳೆ ಸಾರ್ವಜನಿಕ ಹಾಗೂ ಖಾಸಗಿ ಸ್ವತ್ತಿಗೆ ಹಾನಿಯಾದರೆ ಆ ನಷ್ಟವನ್ನು ಆಯೋಜಕರೆ ಭರಿಸಬೇಕು. ಜೀವ ಹಾನಿಯಾದರೆ ಜೈಲು ಶಿಕ್ಷೆ, ದಂಡವನ್ನು ವಿಧಿಸಲಾಗುತ್ತದೆ. ಈ ಎಲ್ಲ ಅಂಶಗಳು ಈ ಕಾಯ್ದೆಯಲ್ಲಿವೆ. ಬೆಂಗಳೂರಿನಲ್ಲಿ ಕಳೆದ ಜುಲೈನಲ್ಲಿ ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಆದ ದುರ್ಘಟನೆ ನಮ್ಮನ್ನು ಬೆಚ್ಚಿ ಬೀಳಿಸಿದೆ. ಈ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ಜಾರಿ ಮಾಡುತ್ತಿದ್ದೇವೆ. ಇದರಿಂದ ದೊಡ್ಡ ಕಾರ್ಯಕ್ರಮ, ಸಮಾರಂಭಗಳಲ್ಲಿ ಉಂಟಾಗುವ ಅವಘಡಗಳನ್ನು ತಡೆಯಬಹುದು ಎಂದು ಸದನದಲ್ಲಿ ಹೇಳಿದರು.

ದೊಡ್ಡ ದೊಡ್ಡ ಸಮಾರಂಭಗಳನ್ನು ಆಯೋಜಿಸುವವರು 1 ಕೋಟಿ ರೂಪಾಯಿ ಇಂಡಿಮೆಂಟ್ ಬಾಂಡ್‌ನ್ನು ನೀಡಬೇಕಾಗುತ್ತದೆ. ಈ ಕಾನೂನುಗಳನ್ನು ಉಲ್ಲಂಘಿಸಿದರೆ ಅಂತಹವರಿಗೆ ದಂಡ, ಜೈಲು ಶಿಕ್ಷೆ ವಿಧಿಸಲು ಅವಕಾಶ ಇದೆ ಎಂದು ಹೇಳಿ, ಜತೆಗೆ ವದಂತಿಗಳನ್ನು ಹರಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವವರ ವಿರುದ್ಧವೂ ಕ್ರಮ ಕೈಗೊಳ್ಳಲು ಈ ಕಾನೂನು ಅವಕಾಶ ಮಾಡಿಕೊಡಲಿದೆ ಎಂದು ಹೇಳಿದರು.

ಗೃಹ ಸಚಿವರು ವಿಧೇಯಕದ ಬಗ್ಗೆ ವಿವರಣೆ ನೀಡಿದ ನಂತರ ಮಾತನಾಡಿದ ಬಿಜೆಪಿಯ ಸುರೇಶ್‌ಕುಮಾರ್ ಅವರು, ಸರ್ಕಾರಕ್ಕೆ ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಈ ಕಾನೂನನ್ನು ತರುತ್ತಿದೆ. ಕೆಡಿಸಿದ ಮೇಲೆ ಬುದ್ಧಿ ಬಂತು ಎಂದು ನಾವು ಹೇಳಬಹುದು. ದೇಶದಲ್ಲಿ ದೊಡ್ಡ ದೊಡ್ಡ ಸಮಾರಂಭಗಳು ನಡೆಯುತ್ತವೆ. ಪೂರಿ ಜಗನ್ನಾಥ ರಥೋತ್ಸವದಲ್ಲಿ ಲಕ್ಷಾಂತರ ಜನ ಸೇರುತ್ತದೆ. ಅಲ್ಲೆಲ್ಲಾ ಹೇಗೆ ಜನ ನಿಯಂತ್ರಿಸುತ್ತಾರೆ. ಇದನ್ನೆಲ್ಲಾ ನಾವು ತಿಳಿದುಕೊಳ್ಳಬೇಕು. ಜುಲೈ 4 ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಘಟನೆ ಪ್ರಚಾರದ ಹಪಹಪಿಯಿಂದ ಆದ ಘಟನೆ. ಅದು ಕನ್ನಡಿಗರ ಪಾಲಿಗೆ ಕಪ್ಪು ಬುಧವಾರ ಎಂದು ವ್ಯಾಖ್ಯಾನಿಸಿ, ಅವಘಡಗಳಿಗೆ ಪ್ರಚೋದನೆ ನೀಡುವವರ ವಿರುದ್ಧವೂ ಕ್ರಮ ಕೈಗೊಳ್ಳುವ ಅಂಶವನ್ನು ಕಾಯ್ದೆಯಲ್ಲಿ ಸೇರಿಸಿ ಎಂದು ಹೇಳಿ, ಈ ಬಿಲ್‌ನ್ನು ನಾನು ಸ್ವಾಗತಿಸುತ್ತೇನೆ. ಆದರೆ 11 ಅಮಾಯಕರು ಬಲಿಯಾದ ಮೇಲೆ ಈ ವಿಧೇಯಕವನ್ನು ತಂದಿರುವುದು ಖೇದಕರ ಎಂದು ಹೇಳಿದರು.

ಬಿಜೆಪಿಯ ಸುರೇಶ್‌ಕುಮಾರ್ ಅವರು ವಿಧೇಯಕವನ್ನು ಸ್ವಾಗತಿಸಿದರೆ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಸದಸ್ಯರಾದ ಸುನೀಲ್‌ಕುಮಾರ್, ಹರೀಶ್ ಪೂಂಜ, ಸುರೇಶ್‌ಗೌಡ, ಉಮನಾಥ್ ಕೋಟ್ಯನ್, ಸಿ.ಸಿ. ಪಾಟೀಲ್, ಬಿ.ವೈ. ವಿಜಯೇಂದ್ರ ಸೇರಿದಂತೆ ಬಿಜೆಪಿಯ ಹಲವು ಸದಸ್ಯರು ಈ ಕಾಯ್ದೆ ಹೋರಾಟಗಳನ್ನು ಹತ್ತಿಕ್ಕುವ ಕಾಯ್ದೆಯಾಗಿದೆ. ರಾಜಕೀಯ ಸಭೆಗಳಲ್ಲಿ ಅವಘಡಗಳಾದರೆ ಅದಕ್ಕೆ ರಾಜಕೀಯ ನಾಯಕರನ್ನು ಹೊಣೆ ಮಾಡುವುದು ಸರಿಯಲ್ಲ. ಏನೋ ನಾವು ರಾಜಕೀಯಕ್ಕೆ ಬಂದಿದ್ದೇವೆ. ರಾಜಕೀಯ ಸಭೆಗಳಲ್ಲಿ ಅವಘಡಗಳಾದರೆ ಕೊನೆಗಾಲದಲ್ಲಿ ಜೈಲಿನಲ್ಲಿ ಇರಬೇಕಾದಂತಹ ಪರಿಸ್ಥಿತಿ ಸೃಷ್ಠಿಯಾಗುತ್ತದೆ. ಈ ಕಾಯ್ದೆಯನ್ನು ವಾಣಿಜ್ಯ ಮತ್ತು ವಾಣಿಜ್ಯೇತರ ಎಂದು ವಿಭಜಿಸಿ. ವಾಣಿಜ್ಯ ಕಾರ್ಯಕ್ರಮಗಳಿಗೆ ಈ ಕಾಯ್ದೆಯನ್ನು ಅನ್ವಯಿಸಿ. ವಾಣಿಜ್ಯೇತರ ಕಾರ್ಯಕ್ರಮಗಳನ್ನು ಈ ಕಾಯ್ದೆ ಬೇಡ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದರು.

ಈ ಕಾಯ್ದೆಯಲ್ಲಿ ಸ್ವಲ್ಪ ಗೊಂದಲಗಳಿವೆ. ಸ್ಪಷ್ಟನೆ ಅಗತ್ಯವಿದೆ. ತರಾತುರಿಯಲ್ಲಿ ಕಾಯ್ದೆ ಬೇಡ. ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಿ ಎಂದು ಒತ್ತಾಯಿಸಿದರು.

ಇದಕ್ಕೆ ಬಿಜೆಪಿಯ ಬಹುತೇಕ ಸದಸ್ಯರು ಬೆಂಬಲ ಸೂಚಿಸಿದರು.

ಆಗ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಎದ್ದುನಿಂತು ರಾಜಕೀಯ ಸಭೆಗಳಿಗೂ ಈ ಕಾಯ್ದೆ ಅನ್ವಯವಾಗುತ್ತದೆ. ಜಾತ್ರೆ, ಧಾರ್ಮಿಕ ಸಮಾರಂಭ, ಮದುವೆ ಮತ್ತಿತರ ಕೌಟುಂಬಿಕ ಸಮಾರಂಭಗಳಿಗೆ ಈ ಕಾಯ್ದೆ ಅನ್ವಯವಾಗಲ್ಲ. ಹಾಗೆಯೇ ಸರ್ಕಾರಿ ಕಾರ್ಯಕ್ರಮಗಳಿಗೂ ಅನ್ವಯವಾಗಲ್ಲ. ಅನುಮತಿಗೆ ಇರುವ 10 ದಿನಗಳನ್ನು 5 ದಿನಕ್ಕೆ ಇಳಿಸೋಣ, ವಿಧೇಯಕಕ್ಕೆ ಅನುಮತಿ ಕೊಡಿ ಎಂದು ಮನವಿ ಮಾಡಿದರು.

## ವಿದ್ಯಾರ್ಥಿಗಳ ನಡೆ ಕೃಷಿಯ ಕಡೆ

## ಕೃಷಿ ಒಂದು ಉದ್ಯೋಗವಲ್ಲ ಜೀವನವಿಧಾನ ಕೆ.ವಿಜಯಲಕ್ಷ್ಮೀ



ಯುವ ಮಾರ್ಗ ಸುದ್ದಿ

**ಮಾನ್ವಿ,ಆ.21–** ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ಪದವಿ ಕೇವಲ ಸರ್ಕಾರಿ ನೌಕರಿ ಪಡೆಯಲು ಮಾತ್ರ ಎನ್ನುವ ಭಾವನೆ ಜನರಲ್ಲಿ ಹೆಚ್ಚಾಗುತ್ತಿದೆ. ಆದರೆ ಹೆಚ್ಚು ಸಂಬಳ ಬರುವ ಸರ್ಕಾರಿ ನೌಕರಿಗಿಂತ ಕೃಷಿ ಕೆಲಸದಲ್ಲಿ ತೊಡಗುವುದು ಉತ್ತಮ. ಎಂದು ನೇತಾಜಿ ಪಿ.ಯು. ಕಾಲೇಜಿನ ಪ್ರಾಚಾರ್ಯೆ ಕೆ.ವಿಜಯಲಕ್ಷ್ಮೀ ಹೇಳಿದರು.

ಅವರು ಇಂದು ಪ್ರತ್ಯಕ್ಷ ಪಾಠ ಬೋಧನೆ ಅಡಿಯಲ್ಲಿ ನೇತಾಜಿ ಪದವಿಪುರ್ವ ಕಾಲೇಜಿನ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳನ್ನು ಗುಡದಿನ್ನಿ ಗ್ರಾಮದ ಹೊಲ ಗದ್ದೆಗಳ ವೀಕ್ಷಣೆಗೆ ಕರೆದೊಯ್ಯಲಾಗಿತ್ತು. ಆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕೃಷಿ ಅಂದ ತಕ್ಷಣ ಬರಿ ಉತ್ತುವುದು, ಬಿತ್ತುವುದು, ಅಷ್ಟೆ ಅಲ್ಲ, ಅಲ್ಲಿ ದನಕರುಗಳ ಸಾಕಾಣಿಕೆ, ಕುರಿ ಸಾಕಾಣಿಕೆ, ಕೋಳಿಸಾಕಾಣಿಕೆ, ಹೈನುಗಾರಿಕೆ , ಕೂಡಿ ಬಾಳುವುದು ಎಲ್ಲವನ್ನೂ ಒಳಗೊಂಡ ಒಂದು ಬದುಕಿನ ವಿಧಾನ. ಇಲ್ಲಿ ಖುಷಿ ಇದೆ, ನೆಮ್ಮದಿ ಇದೆ. ಇಂತಹ ರೈತನ ಜೀವನದ ದಾರಿಯಲ್ಲಿ ನಾವೆಲ್ಲಾ ಸಾಗೋಣ ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ನೇತಾಜಿ ಕಾಲೇಜಿನ 160 ವಿದ್ಯಾರ್ಥಿಗಳು ಮತ್ತು ಎಲ್ಲಾ ಉಪನ್ಯಾಸಕರು ಹತ್ತಿ ಹೊಲದಲ್ಲಿ ಕಳೆ ತೆಗೆದರು. ನಂತರ ಗದ್ದೆಗೆ ಇಳಿದು ಭತ್ತ ನಾಟಿಯನ್ನು ಪರಿಚಯ ಮಾಡಿಕೊಂಡರು. ಹೊಲದ ಒಡೆಯ ಅಮರೇಶ ನಾಯಕ ಗುಡದಿನ್ನಿ ಅವರು ಒಕ್ಕಲುತನದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಸಂಸ್ಥೆಯ ಅಧ್ಯಕ್ಷ ಕೆ..ಈ.ನರಸಿಂಹ, ಸಹಕಾರ್ಯದರ್ಶಿ ಕೆ.ರವಿವರ್ಮಾ, ಉಪನ್ಯಾಸಕರಾದ ಆರೀಫ್ , ಚಂದ್ರುಜಾಧವ್, ರಮೇಶ್, ನಾಗರಾಜ್, ವೀರನಗೌಡ, ಸದ್ದಾಂಹುಸೇನ್, ಕಾವ್ಯ, ಸೇರಿದಂತೆ ಇತರರು ಭಾಗವಹಿಸಿದ್ದರು.

## ಉಪ ಲೋಕಾಯುಕ್ತರಾದ ನ್ಯಾ.ಬಿ.ವೀರಪ್ಪ ಅವರಿಂದ ಆಗಸ್ಟ್ 28 ರಿಂದ ಜಿಲ್ಲಾ ಪ್ರವಾಸ

**ರಾಯಚೂರು,ಆ.21–**ಕರ್ನಾಟಕ ಉಪ ಲೋಕಾಯುಕ್ತರಾದ ನ್ಯಾ.ಬಿ.ವೀರಪ್ಪ ಅವರು ಆಗಸ್ಟ್ 28ರಿಂದ ಆಗಸ್ಟ್ 30ರವರೆಗೆ ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಆಗಸ್ಟ್ 27ರ ಬೆಳಗ್ಗೆ 8.40ಕ್ಕೆ ಬೆಂಗಳೂರಿನ ಕೆಎಸ್‌ಆರ್ ರೈಲು ನಿಲ್ದಾಣದಿಂದ ಉದ್ಯಾನ ಎಕ್ಸಪ್ರೆಸ್ ರೈಲ ಮೂಲಕ ಹೊರಟು ಆಗಸ್ಟ್ 28ರ ಬೆಳಿಗ್ಗೆ 4.13ಕ್ಕೆ ರಾಯಚೂರು ನಗರಕ್ಕೆ ಆಗಮಿಸಿ ಕೃಷಿ ವಿಶ್ವವಿದ್ಯಾಲಯದ ಹೊಸ ಅತಿಥಿ ಗೃಹಕ್ಕೆ ತೆರಳುವರು. ಬಳಿಕ ಬೆಳಗ್ಗೆ 6.30ಕ್ಕೆ ಚಹಾ ಸೇವಿಸಿ ಕೆಲಕಡೆ ಭೇಟಿ ನೀಡುವರು. 9 ಗಂಟೆಗೆ ಉಪಹಾರ ಸೇವನೆ ಮಾಡುವರು. ಬಳಿಕ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30ರವರೆಗೆ ನಗರದ ಕೆಲವೆಡೆ ಅನಿರಿಕ್ಷೀತ ಭೇಟಿ ನೀಡುವರು. ಮಧ್ಯಾಹ್ನ 1.30 ರಿಂದ 2.30ರವರೆಗೆ ಕೃಷಿ ವಿವಿ ಅತಿಥಿ ಗೃಹದಲ್ಲಿ ಊಟದ ವಿರಾಮ ಇರುತ್ತದೆ. ಊಟದ ವಿರಾಮದ ನಂತರ ಮಧ್ಯಾಹ್ನ 2.30 ರಿಂದ ನಾನಾ ಪ್ರದೇಶಗಳಿಗೆ ಅನಿರೀಕ್ಷಿತ ಭೇಟಿ ನೀಡುವರು. ರಾತ್ರಿ 8.30ಕ್ಕೆ ಕೃಷಿ ವಿವಿ ಅತಿಥಿ ಗೃಹದಲ್ಲಿ ಊಟ ಮತ್ತು ವಾಸ್ತವ್ಯ ಮಾಡುವರು.

ಆಗಸ್ಟ್ 29ರ ಬೆಳಿಗ್ಗೆ 6.30ಕ್ಕೆ ಚಹಾ ವಿರಾಮದ ನಂತರ ವಿವಿಧ ಸ್ಥಳಗಳಿಗೆ ಭೇಟಿ ನೀಡುವರು. ಬಳಿಕ 9 ಗಂಟೆಗೆ ಉಪಹಾರ ಸೇವನೆ ಮಾಡುವರು. ಬಳಿಕ 10 ರಿಂದ ಮಧ್ಯಾಹ್ನ 1.30ಗಂಟೆವರೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸುವರು.

ಮಧ್ಯಾಹ್ನ 1.30 ರಿಂದ 2.30ರವರೆಗೆ ಕೃಷಿ ವಿವಿ ಅತಿಥಿ ಗೃಹದಲ್ಲಿ ಊಟದ ವಿರಾಮ ಇರುತ್ತದೆ.

ಮಧ್ಯಾಹ್ನ 2.30ರಿಂದ 5 ಗಂಟೆವರೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸುವರು.

ಸಂಜೆ 5.30ರಿಂದ 6.30 ಗಂಟೆವರೆಗೆ ಕೃಷಿ ವಿಶ್ವ ವಿದ್ಯಾಲಯದ ಆವರಣದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ಸಂಬಂಧಿಸಿದ ಕಾನೂನು ಸಾಕ್ಷರತಾ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆ, ಆರ್‌ಡಿಪಿಆರ್, ಶಿಕ್ಷಣ ಇಲಾಖೆ, ರೇಷ್ಮೆ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಉಪನೋಂದಣಿ ಕಚೇರಿ, ಆರ್‌ಟಿಒ, ಬಿಇಒ ಸೇರಿದಂತೆ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗಿಯಾಗುವರು.

ರಾತ್ರಿ 8.30ಕ್ಕೆ ಕೃಷಿ ವಿವಿ ಅತಿಥಿ ಗೃಹದಲ್ಲಿ ಊಟ ಮತ್ತು ವಾಸ್ತವ್ಯ ಮಾಡುವರು. ಆಗಸ್ಟ್ 30ರಂದು ಬೆಳಿಗ್ಗೆ 6.30ಕ್ಕೆ ಚಹಾ ವಿರಾಮದ ನಂತರ ವಿವಿಧ ಸ್ಥಳಗಳಿಗೆ ಭೇಟಿ ನೀಡುವರು. ಬಳಿಕ 9 ಗಂಟೆಗೆ ಉಪಹಾರ ಸೇವನೆ ಮಾಡುವರು. ಬಳಿಕ ಬೆಳಿಗ್ಗೆ 9.30 ಗಂಟೆಯಿಂದ 10.45 ಗಂಟೆವರೆಗೆ ರಾಯಚೂರಿನ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಜಿಲ್ಲೆಯ ನ್ಯಾಯಾಂಗ ಅಧಿಕಾರಿಗಳು, ಲೋಕಾಯುಕ್ತ ಪೊಲೀಸರೊಂದಿಗೆ ಹಮ್ಮಿಕೊಂಡ ಸಭೆಯಲ್ಲಿ ಭಾಗಿಯಾಗುವರು.

ಬೆಳಿಗ್ಗೆ 11ರಿಂದ 1.45 ಗಂಟೆಗೆವರೆಗೆ ಕೃಷಿ ವಿಶ್ವ ವಿದ್ಯಾಲಯದ ಆವರಣದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ, ಆಗಸ್ಟ 29ರಂದು ಸಾರ್ವಜನಿಕರು ವ್ಯಕ್ತಪಡಿಸಿದ ಬಾಕಿ ಇರುವ ದೂರುಗಳು ಮತ್ತು ಕುಂದುಕೊರತೆಗಳ ಬಗ್ಗೆ ದೂರುದಾರರು ಹಾಗೂ ಪ್ರತಿವಾದಿಗಳ ಸಮ್ಮುಖದಲ್ಲಿ ರಾಯಚೂರಿಗೆ ಸಂಬಂಧಿಸಿದ ಬಾಕಿ ಇರುವ ದೂರುಗಳ ವಿಚಾರಣೆ ಮತ್ತು ವಿಲೇವಾರಿ ನಡೆಸುವರು.

ಕೃಷಿ ವಿವಿಯ ಅತಿಥಿ ಗೃಹದಲ್ಲಿ ಮಧ್ಯಾಹ್ನ ಊಟದ ವಿರಾಮದ ನಂತರ, ಮಧ್ಯಾಹ್ನ 2.30 ರಿಂದ 8.30 ಗಂಟೆಗೆರೆಗೆ ಬೆಳಗಿನ ಬಾಕಿ ಇರುವ ದೂರುಗಳ ವಿಚಾರಣೆ ಮತ್ತು ವಿಲೇವಾರಿ ಕಾರ್ಯಕ್ರಮವನ್ನು ಮುಂದುವರೆಸುವರು.

ರಾತ್ರಿ 8.30ಕ್ಕೆ ಕೃಷಿ ವಿವಿಯ ಅತಿಥಿ ಗೃಹದಲ್ಲಿ ಊಟದ ವಿರಾಮದ ಬಳಿಕ ರಾತ್ರಿ ರಾತ್ರಿ 11.10ಕ್ಕೆ ರಾಯಚೂರು ರೈಲು ನಿಲ್ದಾಣದಿಂದ ಹಾಸನ ಎಕ್ಸಪ್ರೆಸ್ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಕರ್ನಾಟಕ ಲೋಕಾಯುಕ್ತದ ರಿಜಿಸ್ಟ್ರಾರ್ ಎಮ್.ಚಂದ್ರಶೇಖರ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿರವಾರ ಪ.ಪಂ. ಉಪಚುನಾವಣೆ; ಕಾಂಗ್ರೆಸ್ ಅಭ್ಯರ್ಥಿ ಜ್ಯೋತಿ ದಾನನಗೌಡ ಭರ್ಜರಿ ಗೆಲುವು



ಯುವ ಮಾರ್ಗ ಸುದ್ದಿ

**ಸಿರವಾರ, ಆ.21–**ಸಿರವಾರ ಪಟ್ಟಣ ಪಂಚಾಯತಿಯ 12 ನೇ ವಾರ್ಡಿನ ಸದಸ್ಯ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜ್ಯೋತಿ ದಾನನಗೌಡ ಅವರು 324 ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಮಾಜಿ ತಾ.ಪಂ. ಅಧ್ಯಕ್ಷ ದಾನನಗೌಡ ಅವರ ತಾಯಿ ಅಮರಮ್ಮ ಅವರ ಅಕಾಲಿಕ ನಿಧನದಿಂದ ತೆರವಾಗಿದ್ದ 12ನೇ ವಾರ್ಡಿನ ಸದಸ್ಯ ಸ್ಥಾನಕ್ಕೆ ಆ.17 ರಂದು ಮತದಾನ ನಡೆದಿತ್ತು ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಸೇರಿ ಮೂರು ಜನ ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದರು.

ಬುಧವಾರ ಬೆಳಿಗ್ಗೆ ಮತ ಎಣಿಕೆ ನಡೆಯಿತು, ಕಾಂಗ್ರೆಸ್ ಅಭ್ಯರ್ಥಿ ಜ್ಯೋತಿ ಅವರಿಗೆ 324 ಮತಗಳು ಪಡೆದರೆ ಬಿಜೆಪಿಯ ಹುಸೇನಮ್ಮ ಅವರಿಗೆ 111 ಮತಗಳು ಹಾಗೂ ಜೆಡಿಎಸ್ ನ ಮಾಳಮ್ಮ ಅವರು 86 ಮತಗಳು ನೋಟಾಗೆ 1 ಮತಗಳು ಲಭಿಸಿದ್ದು, ಕಾಂಗ್ರೆಸ್ ಅಭ್ಯರ್ಥಿ ಜ್ಯೋತಿ ಅವರು 213 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದರು.

**ಕಾಂಗ್ರೆಸ್ ಕಾರ್ಯಕರ್ತರ ವಿಜಯೋತ್ಸವ:**ಕಾಂಗ್ರೆಸ್ ಅಭ್ಯರ್ಥಿ ಜ್ಯೋತಿ ದಾನನಗೌಡ ಅವರು ಪ.ಪಂ.ಯ ಉಪಚುನಾವಣೆಯಲ್ಲಿ 324 ಮತಗಳನ್ನು ಪಡೆದು 213 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬ್ರಿಜೇಶ್ ಪಾಟೀಲ್, ಪಟ್ಟಣ ಪಂಚಾಯತಿ ಅಧ್ಯಕ್ಷ ವೈಭೂಪನಗೌಡ, ಮಾಜಿ ತಾ.ಪಂ. ಅಧ್ಯಕ್ಷ ದಾನನಗೌಡ, ರಮೇಶ್ ದರ್ಶನ್ ಕರ್ ಶ್ರೀಧರ್ ಸ್ವಾಮಿ, ಗಣೇಕಲ್ ವೀರೇಶ್ ಸಾಹುಕಾರ್, ಲಕ್ಷಿಕಾಂತ್, ಬಸವರಾಜ್ ಗಡ್ಲ, ಚೆನ್ನಪ್ಪ ನಾಗೋಲಿ, ಮಂಜುನಾಥ, ಪ.ಪಂ. ಸದಸ್ಯರಾದ ಸೂರಿ ದುರ್ಗಣ್ಣ ನಾಯಕ್, ಹಾಜಿ ಚೌದ್ರಿ, ಹಸೇನಲಿ ಸಾಬ್, ಮಾರ್ಕಪ್ಪ, ಮೌಲಾಸಾಬ್ ವರ್ಚಸ್, ವೀರೇಶ್ ಗಡ್ಡ, ಡಿ.ಯಮನೂರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಗ್ರೇಟರ್ ಬೆಂಗಳೂರು ವಿಧೇಯಕಕ್ಕೆ ಮೇಲ್ಮನೆ ಅಸ್ತು

**ಬೆಂಗಳೂರು, ಆ.21–**ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕಯವನ್ನು ಮೇಲ್ಮನೆಯಲ್ಲಿ ಇಂದು ಅಂಗೀಕರಿಸಲಾಯಿತು.

ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ 2025' ಅನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮೇಲ್ಮನೆಯಲ್ಲಿ ಮಂಡಿಸಿದರು. ಅಲ್ಪ ಕಾಲದ ಚರ್ಚೆ ಬಳಿಕ ಅನುಮೋದನೆ ನೀಡಲಾಯಿತು.

ತಿದ್ದುಪಡಿ ವಿಧೇಯಕದ ಪ್ರಸ್ತಾವನೆ ವೇಳೆ ಮಾತನಾಡಿದ ಶಿವಕುಮಾರ್ ಅವರು, "ಈ ವಿಧೇಯಕದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಸಂವಿಧಾನದ 74ನೇ ತಿದ್ದುಪಡಿ ಅಡಿಯಲ್ಲಿ ಬರುವ ಪಾಲಿಕೆಗಳ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಭವಿಷ್ಯದಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡಬಾರದು ಎಂಬ ಉದ್ದೇಶದಿಂದ ಈ ತಿದ್ದುಪಡಿಯಲ್ಲಿ ಜಿಬಿಎ ಪಾಲಿಕೆಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಸ್ಪಷ್ಟನೆ ನೀಡಲಾಗಿದೆ" ಎಂದು ತಿಳಿಸಿದರು.

ಸದಸ್ಯರಾದ ಗೋವಿಂದರಾಜು, ಟಿ.ಎ ಶರವಣ, ಹೆಚ್.ಎಸ್ ಗೋಪಿನಾಥ್ ಅವರು ಕೋರಿದ ಸ್ಪಷ್ಟನೆಗೆ ಉತ್ತರ ನೀಡಿದ ಸಚಿವರು, "ನಾವು ಅನೇಕ ಬಾರಿ ನೋಡಿರುವಂತೆ ರಾಜ್ಯ ಸರ್ಕಾರ ಒಂದು ಪಕ್ಷ ಅಧಿಕಾರದಲ್ಲಿದ್ದರೆ, ಪಾಲಿಕೆಯಲ್ಲಿ ಮತ್ತೊಂದು ಪಕ್ಷ ಅಧಿಕಾರದಲ್ಲಿರುತ್ತದೆ. ಇಂತಹ ಸಂದರ್ಭದಲ್ಲಿ ಸಂವಿಧಾನದ 74ನೇ ತಿದ್ದುಪಡಿಗೆ ಧಕ್ಕೆಯಾಗದಂತೆ ಹಾಗೂ ರಾಜ್ಯ ಸರ್ಕಾರ ಪಾಲಿಕೆಗಳನ್ನು ನಿಯಂತ್ರಿಸುವಂತಾಗದಂತೆ ಎಚ್ಚರಿಕೆ ವಹಿಸಲು ಈ ತಿದ್ದುಪಡಿ ತರಲಾಗಿದೆ" ಎಂದರು.

"ಕೆಲವು ಶಾಸಕರು ಜನಸಂಖ್ಯೆ ಹಾಗೂ ವಾರ್ಡ್ ರಚನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಈಗ ನಾವು ಬಳಸಿರುವುದು 2011ರ ಜನಗಣತಿ. ಆಗ ಒಂದು ವಾರ್ಡ್ ನಲ್ಲಿ 18 ಸಾವಿರ ಜನಸಂಖ್ಯೆ ಇದ್ದರೆ ಈಗಿನ ಪರಿಸ್ಥಿತಿಯಲ್ಲಿ 30 ಸಾವಿರದಷ್ಟು ಇರಲಿದೆ. ಮುಂದೆ ಹೊಸ ಪ್ರದೇಶಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಒಳಪಡಿಸುವ ಸಂದರ್ಭದಲ್ಲಿ ನಿಮ್ಮ ಪಕ್ಷದ ಶಾಸಕರ ಅಭಿಪ್ರಾಯವನ್ನು ಸಂಗ್ರಹಿಸಲಾಗುವುದು. ಈ ವಿಚಾರವನ್ನು ಬೇರೆ ರೂಪದಲ್ಲಿ ಚರ್ಚೆಗೆ ಪ್ರಸ್ತಾವನೆ ನೀಡಿ, ಆಗ ಈ ವಿಚಾರವಾಗಿ ನಿಮಗಿರುವ ಅನುಮಾನಗಳಿಗೆ ಸಂಪೂರ್ಣವಾಗಿ ವಿವರಣೆ ನೀಡುತ್ತೇನೆ. ಈಗ ಈ ವಿಧೇಯಕ ಅಂಗೀಕಾರ ಮಾಡಿಕೊಡಿ" ಎಂದು ತಿಳಿಸಿದರು.

ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕಯವನ್ನು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಮಂಡಿಸಿ ಅಂಗೀಕರಿಸಲು ಮನವಿ ಮಾಡಿದರು.ವಿಧೇಯಕ ಬಗ್ಗೆ ಮಾತನಾಡಿದ ಜೆಡಿಎಸ್ ಸದಸ್ಯ ಗೋವಿಂದರಾಜು ಅವರು

ಬಿಬಿಎಂಪಿಗೆ ಬೇರೆ ಇಲಾಖೆಯ ನೌಕರರನ್ನು ಯಾವ ಕಾರಣಕ್ಕೂ ನಿಯೋಜನೆ ಮಾಡಬೇಡಿ, ಈ ಅಂಶವನ್ನು ವಿಧೇಯಕದಲ್ಲಿ ಸೇರ್ಪಡೆ ಮಾಡಿ ಎಂದು ಸಲಹೆ ಮಾಡಿದರು.

ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ ಅಂಗೀಕಾರ ಸಂದರ್ಭದಲ್ಲಿ ನಡೆದ ಚರ್ಚೆಯಲ್ಲಿ ಸಲಹೆ ನೀಡಿದ ಅವರು, ಬಿಬಿಎಂಪಿ ಒಂದು ಸಮೃದ್ಧಿ ಸಂಸ್ಥೆ, ಹೀಗಾಗಿ



ಲೋಕೋಪಯೋಗಿ ಸೇರಿದಂತೆ ಅನೇಕ ಇಲಾಖೆಯ ಇಂಜನಿಯರ್‌ಗಳು ಇಲ್ಲಿ ವರ್ಗಾವಣೆ ಬಯಸುತ್ತಾರೆ, ಹೀಗಾಗಿ ಅವರ ಮೇಲೆ ನೇರವಾದ ಹಿಡಿತ ನಿಮಗೆ ಇರುವುದಿಲ್ಲ, ಹೀಗಾಗಿ ಬೇರೆ ಇಲಾಖೆಯ ಅಧಿಕಾರಿಗಳ ನಿಯೋಜನೆ ಬೇಡವೇ ಬೇಡ, ಈ ಅಂಶವನ್ನು ವಿಧೇಯಕದಲ್ಲಿ ಸೇರ್ಪಡೆ ಮಾಡಿ ಎಂದರು.

ಈ ವೇಳೆ ಬಿಬಿಎಂಪಿ ವಾರ್ಡ್ ವಾರು ಜನಸಂಖ್ಯೆಯ ಹಂಚಿಕೆಯ ವಿಷಯವಾಗಿ ಬಿಜೆಪಿಯ ಗೋಪಿನಾಥ್, ಜೆಡಿಎಸ್ ಸದಸ್ಯ ಶರವಣ್ ಗೊಂದಲ ನಿವಾರಿಸುವಂತೆ ಒತ್ತಾಯಿಸಿದರು. ಆಗ ಉಪಮುಖ್ಯಮಂತ್ರಿಗಳು ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ ಅದನ್ನು ಸುದೀರ್ಘವಾಗಿ ಉತ್ತರಿಸುವೆ ಎಂದರು. ಈ ಚರ್ಚೆಯ ನಂತರ ಮೇಲ್ಮನೆಯಲ್ಲೂ ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ ಅಂಗೀಕೃತಗೊಂಡಿತು.

## ಏರ್‌ಶೋಗೆ ಅನುಮತಿ ನೀಡಿದ ರಾಜನಾಥ್‌ಸಿಂಗ್‌ಗೆ ಅಭಿನಂದನೆ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ



**ಬೆಂಗಳೂರು,ಆ.21–** ಮೈಸೂರು ದಸರಾದಲ್ಲಿ ಏರ್‌ಶೋ ನಡೆಸಲು ಅನುಮತಿಸಿರುವ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದ್ದಾರೆ.

ಮೈಸೂರು ದಸರಾದಲ್ಲಿ ವಾಯುಪಡೆಯಿಂದ ಏರ್‌ಶೋ ನಡೆಯಬೇಕೆಂಬುದು ಬಹುದಿನಗಳ ಕನಸಾಗಿತ್ತು. ಹಲವಾರು ಮುಖ್ಯಮಂತ್ರಿಗಳು ಈ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಚಾರವಾಗಿ ವೈಯಕ್ತಿಕ ಆಸಕ್ತಿ ತೋರಿಸಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್‌ರನ್ನು ಮೂರು-ನಾಲ್ಕು ಬಾರಿ ಭೇಟಿಮಾಡಿ, ಒತ್ತಡ ಹಾಕಿದ್ದರು. ಕಳೆದ ವರ್ಷವೇ ಏರ್‌ಶೋಗೆ ಅನುಮತಿ ದೊರೆಯುವ ನಿರೀಕ್ಷೆಯಿತ್ತು, ಆದರೆ ಅದು ಸಾಧ್ಯವಾಗಲಿಲ್ಲ. ಈ ಬಾರಿ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಏರ್‌ಶೋಗೆ ಅನುಮತಿಸಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನರ ಪರವಾಗಿ ರಾಜ್‌ನಾಥ್ ಅವರನ್ನು ಅಭಿನಂದಿಸಿದ್ದಾರೆ.

ಮೈಸೂರು ದಸರಾ ನಾಡಿನ ಅಸಿತೆಯಾಗಿದೆ. ಐತಿಹಾಸಿಕವಾದ ಈ ಆಚರಣೆಯಲ್ಲಿ ಭಾರತೀಯ ವಾಯುಪಡೆಯು ಭಾಗಿಯಾಗುತ್ತಿರುವುದು ಅತ್ಯಂತ ಸಂತೋಷದ ವಿಷಯ ಎಂದು ಸಿಎಂ ಹೇಳಿದ್ದಾರೆ.ಏರ್ ಶೋದಿಂದಾಗಿ ದಸರಾದ ಪ್ರವಾಸಿಗರ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮೈಸೂರು ದಸರಾಗೆ ರಾಜನಾಥ್‌ಸಿಂಗ್ ಅವರನ್ನು ಸಿದ್ದರಾಮಯ್ಯ ಅತ್ಮೀಯವಾಗಿ ಆಹ್ವಾನಿಸಿದ್ದಾರೆ.

# ಲೋಕಸಭೆ ಕಲಾಪ ಅನಿರ್ಧಿಷ್ಟಾವಧಿಗೆ ಮುಂದೂಡಿಕೆ

**ನವದೆಹಲಿ,ಆ. 21–** ಬಿಹಾರದಲ್ಲಿ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿರೋಧಿಸಿ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆ, ಕಲಾಪಕ್ಕೆ ಅಡ್ಡಿ, ಸಭಾತ್ಯಾಗಗಳ ನಡುವೆಯೇ ಲೋಕಸಭೆ ಅನಿರ್ಧಿಷ್ಟಾವಧಿಗೆ ಮುಂದೂಡಲಾಗಿದೆ.

ರಾಜ್ಯಸಭೆಯ ಕಲಾಪವನ್ನು ಮದ್ಯಾಹ್ನ 2 ಗಂಟೆಯ ತನಕ ಮುಂದೂಡಲಾಗಿದೆ. ಈ ನಡುವೆ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ 12 ಹಾಗೂ ರಾಜ್ಯಸಭೆಯಲ್ಲಿ 14 ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆದಿದೆ.

ಜುಲೈ 21ರಂದು ಈ ಬಾರಿಯ ಮುಂಗಾರು ಅಧಿವೇಶನ ಆರಂಭಗೊಂಡ ದಿನದಿಂದ ಆಪರೇಷನ್ ಸಿಂಧೂರ ಕುರಿತ ಚರ್ಚೆಗೆ ಆರಂಭದಲ್ಲಿ ಒತ್ತಾಯಿಸಿದ ವಿರೋಧ ಪಕ್ಷಗಳು ನಂತರ ಬಿಹಾರದಲ್ಲಿನ ಎಸ್‌ಐಆರ್ ಪರಿಷ್ಕರಣೆ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಭಟನೆ ಮುಂದುವರಿಸಿತು. ಮುಂಗಾರು ಅಧಿವೇಶನಕ್ಕೆ ಇಂದು ತೆರೆ ಬಿದ್ದಿದೆ.

ಲೋಕಸಭೆಯಲ್ಲಿ ಮಂಡಿಸಲಾದ ಮಸೂದೆಗಳು ಗೋವಾ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರುಹೊಂದಾಣಿಕೆ ಮಸೂದೆ ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ, ಮಣಿಪುರ ಹಂಚಿಕೆ ಮಸೂದೆ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ರಾಷ್ಟ್ರೀಯ ಉದ್ದೀಪನ ವಿರೋಧಿ (ತಿದ್ದುಪಡಿ) ಮಸೂದೆ ,ಆದಾಯ ತೆರಿಗೆ ,ತೆರಿಗೆ ಕಾನೂನುಗಳ (ತಿದ್ದುಪಡಿ) ಮಸೂದೆ, ಭಾರತೀಯ ಬಂದರು ಮಸೂದೆ ,ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ , ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜೆಂಟ್ ತಿದ್ದುಪಡಿ ಮಸೂದೆ ,ಆನ್ಲೈನ್ ಗೇಮಿಂಗ್ (ಉತ್ತೇಜನ ಮತ್ತು ನಿಯಂತ್ರಣ) ಮಸೂದೆಗೆ ಅಂಕಿತ ದೊರೆಯಿತು

ರಾಜ್ಯಸಭೆಯಲ್ಲಿ ಮಂಡನೆಯಾದ ಮಸೂದೆಗಳಾದ ಹಡಗುಗಳಿಗೆ ಸರಕು ತುಂಬುವ ಶುಲ್ಕಗಳ ಮಸೂದೆ, ಸಮುದ್ರ ಮೂಲಕ ಸರಕು ಸಾಗಣೆ ಮಸೂದೆ ,ಕರಾವಳಿ ಸರಕು ಸಾಗಣೆ ಮಸೂದೆ,ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ ,ಮಣಿಪುರ ಹಂಚಿಕೆ (ಸಂ. 2) ಮಸೂದೆ , ಗೋವಾ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರುಹೊಂದಾಣಿಕೆ ಮಸೂದೆ

ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ,ರಾಷ್ಟ್ರೀಯ ಉದ್ದೀಪನ ವಿರೋಧಿ (ತಿದ್ದುಪಡಿ) ಮಸೂದೆ ,ಆದಾಯ ತೆರಿಗೆ ,ತೆರಿಗೆ ಕಾನೂನುಗಳ (ತಿದ್ದುಪಡಿ) ಮಸೂದೆ, ಭಾರತೀಯ ಬಂದರು ಮಸೂದೆ ,ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ ,ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜೆಂಟ್ ತಿದ್ದುಪಡಿ ಮಸೂದೆ ಗೆ ಸಮ್ಮತಿ ದೊರೆತಿದೆ.

'ಈ ಬಾರಿ ಸಂಸತ್ ಅಧಿವೇಶನದಲ್ಲಿ ವಿರೋಧ ಪಕ್ಷಗಳು ನಿರಂತರ ಪ್ರತಿಭಟನೆಯಲ್ಲಿ ತೊಡಗಿದ್ದರಿಂದಾಗಿ ಹಲವು



ಮಸೂದೆಗಳ ಕುರಿತು ನಡೆಯಬೇಕಾಗಿದ್ದ ಚರ್ಚೆಯಲ್ಲಿ ಪಾಲ್ಗೊಂಡಿಲ್ಲ. ಅವರ ಹಠಮಾರಿ ಧೋರಣೆಯಿಂದಾಗಿ ಚರ್ಚೆಯೇ ಇಲ್ಲದೆ ಹಲವು ಮಸೂದೆಗಳು ಮಂಡನೆಯಾದವು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂಗಾರು ಅಧಿವೇಶನದಲ್ಲಿ ರಾಜ್ಯಸಭೆಯಲ್ಲಿ ಮೊದಲ ದಿನ ನಡೆದ ಹಡಗುಗಳಿಗೆ ಸರಕು ತುಂಬುವ ಶುಲ್ಕಗಳ ಮಸೂದೆ 2025 ಯಾವುದೇ ಚರ್ಚೆ ಇಲ್ಲದೆ ಮಂಡನೆಯಾಯಿತು. ಉಳಿದ ಮಸೂದೆಗಳ ಕುರಿತು ತುಸು ಮಟ್ಟಿನ ಚರ್ಚೆಗಳು ನಡೆದವು. ಕೆಲವು ಮಸೂದೆಗಳು ವಿರೋಧ ಪಕ್ಷಗಳ ಸದಸ್ಯರ ಸಭಾತ್ಯಾಗದ ನಂತರ ಅನುಮೋದನೆ ಪಡೆದವು' ಎಂದು ತಿಳಿಸಿದ್ದಾರೆ.

## ಭೂಗರ್ಭದಲ್ಲಿ ನೀರು ಸ್ಥಾನ ಪಲ್ಲಟದಿಂದ ಸ್ಫೋಟ ಭಯ ಪಡುವ ಅವಶ್ಯಕತೆ ಇಲ್ಲ :ನಾಗಯ್ಯ್ ಹಿರೇಮಠ್



**ವಾಡಿ:ಅ.21–** ಚಿತ್ತಾಪುರ ತಾಲ್ಲೂಕಿನ ಇಂಗಳಗಿ ಗ್ರಾಮದಲಿ ಮಂಗಳವಾರ ರಾತ್ರಿ ಭಾರಿ ಸ್ಫೋಟ ಶಬ್ದ ಕೇಳ್ಳಿ ಬಂದಿತು ಜನರು ಆತಂಕ ದಿಂದ ಮನೆ ಹೊರೆಗೆ ಬಂದು ಭಯ ಭೀತರಾಗಿದರು ಅದರಿಂದ ಬುಧವಾರ ಬೆಳ್ಳಿಗೆ ತಾಲ್ಲೂಕಿನ ದಂಡಧಿಕಾರಿ ಹಾಗು ತೆಹಸೀಲ್ದಾರ್ ನಾಗಯ್ಯ್ ಹಿರೇಮಠ್ ಅವರು ತಮ್ಮ ಇಲಾಖೆಯ ಸಿಬ್ಬಂದಿ ದೊಂದಿಗೆ ಇಂಗಳಗಿ ಗ್ರಾಮಕ್ಕೆ ಭೇಟಿ ನೀಡಿ ಜನರನ್ನು ಯಾವುದೆ ವಿಷಯ ಭಯ ಪಡುವ ಅವಶ್ಯಕತೆ ಇಲ್ಲ ಇಲ್ಲ ಇದು ಪ್ರಕೃತಿ ಭುಗರ್ಭದಲ್ಲಿ ಪರಿಸರ ಅಸಮತೋಲನ್ದಿಂದ ಅದು ಆಗಾಗ ಜೋರಾದ ಶಬ್ದ ಕೇಳ್ಳಿಸುತ್ತದೆ ಇದು ಭೂಕಂಪವಲ ಇದಕ್ಕೆ ಸಾರ್ವಜನಿಕರು ಭಯಾಪಡುವ ಅವಶ್ಯಕತೆ ಇಲ್ಲ ಎಂದು ಚಿತ್ತಾಪುರ ತೆಹಸೀಲ್ದಾರ್ ನಾಗಯ್ಯ್ ಹಿರೇಮಠ್ ಅವರು ಗ್ರಾಮಸ್ಥರನು ಧೈರ್ಯ ತುಂಬಿದರು ಪಕ್ಕದಲ್ಲಿ ಅದಾನಿ ಒಡೆತನದ ಸಿಮೆಂಟ್ ಕಾರ್ಖಾನೇಸುಮಾರು 50 ವರ್ಷ ದಿಂದ ಗಣ್ಣೀಗಾರಿಕೆ ಮಾಡುತ್ತಿರುವುದರಿಂದ ಭುಗರ್ಭದಲ್ಲಿ ನೀರು ಸ್ಥಾನ ಪಲ್ಲಟವಾಗಿದೆ ಹೀಗಾಗಿ ಭಾರಿ ಶಬ್ದ ಕೇಳ್ಳಿಸಿದೆ ಈ ಬಗ್ಗೆ ಜಿಲ್ಲಾಧಿಕಾರಿ ಅವರಿಗೆ ವರದಿಸಲಿಸಲಾಗುವುದು ಎಂದು ತಿಳಿಸಿದರು ಇಂಗಳಗಿ ಗ್ರಾಮ ಅಭಿವೃದ್ಧಿ ಹೋರಾಟ ಸಮಿತಿಯ

ಅಧ್ಯಕ್ಷ ಗೌಸ್ ದುಧನಿ ಊರಿನ ಪ್ರಮುಖರಾದ ಜ್ಯೋತಿ. ಹೊಸಪೇಟೆ ರುದ್ರ. ಸಾಹುಅಳ್ಳೊಳ್ಳಿ ಸುಬಾಷ ಯಾಮೇರ ಮಳಿಂಗರಾಯ ಮಲ್ಲಪ್ಪ ನಾಟಿಕಾರ್ ಶೇರ್ ಅಲಿ ದುಧನಿ ಜಗನಾಥ ಹಾಗು ಕಂದಾಯ ನೀರಿಕ್ಷಕರು ನಾಲವಾರ ಪ್ರಶಾಂತ್ ರಾಠೋಡ ಅವರು ಇದ್ದರು

## ವಿದ್ಯಾರ್ಥಿನಿ ಕೊಲೆ ಪ್ರಕರಣ ಆರೋಪಿಗಳ ವಿರುದ್ಧ ಕಠಿಣ ಕ್ರಮ : ಗೃಹಸಚಿವ ಪರಮೇಶ್ವರ್



**ಬೆಂಗಳೂರು,ಆ.21–** ಚಿತ್ರದುರ್ಗ ತಾಲ್ಲೂಕಿನ ರಾಷ್ಟ್ರಿ?ಯ ಹೆದ್ದಾರಿ 48ರ ಸಮೀಪದ ಗೋನೂರು ರಸ್ತೆಯಲ್ಲಿ ಪದವಿ ವಿದ್ಯಾರ್ಥಿನಿ ವರ್ಷಿತ ಕೊಲೆ ಪ್ರಕರಣದ ಆರೋಪಿಗಳನ್ನು ಮುಲಾಜಿಲ್ಲದೆ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಪಡಿಸುತ್ತೇವೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಸಿದ್ದಾರೆ.

ಪರಿಷತ್‌ನಲ್ಲಿ ಬಿಜೆಪಿಯ ನವೀನ್ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಗೃಹಸಚಿವರು, ಈ ಪ್ರಕರಣದಲ್ಲಿ ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಕಾನೂನಿನ ಪ್ರಕಾರ ಆರೋಪಿಗಳಿಗೆ ಯಾವ ಶಿಕ್ಷೆಯಾಗಬೇಕೋ ಅದು ಆಗೇ ಆಗುತ್ತದೆ ಎಂದು ಹೇಳಿದರು. ಇಂಥ ಘಟನೆಗಳು ನಾಗರಿಕ ಸಮಾಜದಲ್ಲಿ ಆಗಲೇಬಾರದು. ಯಾರನ್ನು ನಾವು ಸಹಿಸಿಕೊಳ್ಳುವುದಿಲ್ಲ. ನಾನು ಈ ಪ್ರಕರಣ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ನಾಳೆ ಸದನಕ್ಕೆ ಪೂರ್ಣ ಮಾಹಿತಿ ನೀಡುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ನವೀನ್, ಮಂಗಳವಾರ ಯುವತಿಯ ಮೃತದೇಹ ಪತ್ತೆಯಾಗಿದೆ. ಐಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯಲ ಕೋವೇರಹಟ್ಟಿ ಗ್ರಾಮದ ವರ್ಷಿತ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಯುವತಿಯನ್ನು ದುಷ್ಕರ್ಮಿಗಳು ಅಪಹರಿಸಿ ಅತ್ಯಂತ ಭೀಕರವಾಗಿ ಕೊಲೆ ಮಾಡಿ ಮೃತದೇಹವನ್ನು ಸುಟ್ಟು ಹಾಕಿದ್ದಾರೆ. ನಾವು ಮಹಿಳೆಯರ ಸುರಕ್ಷತೆಯ ಕುರಿತು ಎರಡು ಮಸೂದೆಗಳನ್ನ ಅಂಗೀಕರಿಸಿದ್ದೇವೆ. ಈ ಪ್ರಕರಣ ನೋಡಿದರೆ ಪೋಷಕರು ತಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ನ್ಯಾಯಕ್ಕಾಗಿ ದಲಿತ ಸಂಘಟನೆಗಳು ಮತ್ತಿತರ ಸಂಘಟನೆಗಳು ಹೋರಾಟ ನಡೆಸುತ್ತಿವೆ. ಪೋಷಕರು ನ್ಯಾಯಕ್ಕಾಗಿ ಅಂಗಲಾಚುತ್ತಿದ್ದಾರೆ. ಸರ್ಕಾರ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಿ ಎಂದು ಒತ್ತಾಯಿಸಿದರು.ಇದಕ್ಕೂ ಮುನ್ನ ಸದಸ್ಯರಿಗೆ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಿದಕ್ಕೆ ಮುಖ್ಯ ಸಚೇತಕ ಸಲೀಂ ಮತ್ತಿತರರು ಆಕ್ಷೆ?ಪಿಸಿದರು. ಮೊದಲು ವಿಧೇಯಕಗಳ ಮಂಡನೆಯಾಗಲಿ. ನಂತರ ಚರ್ಚೆಗೆ ಅವಕಾಶ ಕೊಡಿ ಎಂದು ಸಭಾಪತಿಗೆ ಮನವಿ ಮಾಡಿದರು. ನಾನು ಅವಕಾಶ ನೀಡಿದ ಮೇಲೆ ನೀವೇಕೆ ಪ್ರಶ್ನೆ ಮಾಡುತ್ತಿರಿ ಸುಮನೆ ಕುಳಿತುಕೊಳ್ಳಿ ಎಂದು ಸಭಾಪತಿಗಳು ಗರಂ ಆದರು.

# ಸಿರುಗುಪ್ಪ ನಗರ ಹಾದು ಹೋಗುವ ರಸ್ತೆಯಲ್ಲಿ ಹೆಚ್ಚುತ್ತಿರುವ ಅಪಘಾತಗಳು

**ಸಿರುಗುಪ್ಪ, ಆ.21:** ನಗರದ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 150ಎ ರಲ್ಲಿ ಸತತ ಮಳೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ಗುಂಡಿಗಳು ಬಿದ್ದಿದ್ದು, ನಿತ್ಯವು ಈ ರಸ್ತೆಯಲ್ಲಿ ಸಾರ್ವಜನಿಕರು ವಾಹನಗಳೊಂದಿಗೆ ಸಂಚರಿಸಲು ಗೊಳಾಡುವ ಪರಿಸ್ಥಿತಿ ಉಂಟಾಗಿದೆ.

ತಾಲೂಕಿನಲ್ಲಿ ಮಳೆ ಬಂದರೆ ಸಾಕು ಗುಂಡಿಗಳ ದರ್ಭರು ಮಳೆ ಬರದೇ ಹೋದರೆ ಧೂಳು ಕಾಟಕ್ಕೆ ತಾಲೂಕಿನ ಜನತೆ ದಿನೇ ದಿನೇ ಬೇಸೆತ್ತು ಹೋಗಿದ್ದಾರೆ. ಮದುವೆ, ಕಾರ್ಯಕ್ರಮ, ಕೆಲಸದ ಚಟುವಟಿಕೆಗಳಿಗೆ ಸಿರುಗುಪ್ಪ ನಗರಕ್ಕೆ ಬೇರೆ ಬೇರೆ ತಾಲೂಕು, ಜಿಲ್ಲೆಯಿಂದ ಆಗಮಿಸುವ ಜನರು ಸಿರುಗುಪ್ಪ ಎಂದರೆ ಸಾಕು ಧೂಳು ಅಥವಾ ಗುಂಡಿಗಳಿಂದ ಬೇಸತ್ತು ಹೋಗಿದ್ದಾರೆ.

ಗುರುವಾರ ಇಬ್ರಾಹಿಂಪುರ ಗ್ರಾಮದಲ್ಲಿ ಕೆಕೆಆರ್ ಟಿಸಿ ಬಸ್ ಗುಂಡಿಯಲ್ಲಿ ಸಿಕ್ಕು ಪ್ರಯಾಣಿಕರು ಪರದಾಡುವಂತಾಯಿತು.ಅಲ್ಲದೇ ಸಿರುಗುಪ್ಪ ನಗರದ ಆಕ್ಸಿಸ್ ಬ್ಯಾಂಕ್ ಮುಂಭಾಗದಲ್ಲಿ ನೀರಿನ ಟ್ಯಾಂಕರ್ ಉರುಳಿಬಿದ್ದಿದೆ. ಇದರಿಂದಾಗಿ ತಾಸುಗಟ್ಟಲೆ ಸಮಚಾರ ವ್ಯತ್ಯಯಗೊಂಡಿತು.



ಹೆಸರಿಗಷ್ಟೇ ರಾಷ್ಟ್ರೀಯ ಹೆದ್ದಾರಿ ಆದರೆ ಇಲ್ಲಿನ ದೊಡ್ಡ ದೊಡ್ಡ ಗುಂಡಿಗಳಿಂದಾಗಿ ನಿತ್ಯವೂ ಸಾರ್ವಜನಿಕರು ಪರಿತಪಿಸುವಂತಾಗಿದೆ. ನಗರದ ದೇವಲಾಪುರ ಕ್ರಾಸ್ ನಿಂದ ಧಡೇಸೂಗೂರು ವರೆಗಿನ ಕೇವಲ ಎಂಟು ಕಿಮೀ ಪ್ರಯಾಣಿಸಲು ಒಂದು ಗಂಟೆ ಸಮಯ ತೆಗೆದುಕೊಳ್ಳುತ್ತದೆ ಎಂದು ವಕೀಲ ಯು.ವೆಂಕೋಬ ಬೇಸರ ವ್ಯಕ್ತಪಡಿಸಿದರು.

# ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆ ಕುರಿತು ವಿಚಾರ ಸಂಕಿರಣ

**ಬೀದರ್, ಆ.21–**ಬೀದರ್‌ನ ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯದಲ್ಲಿ ಬಾ.ಪೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ವತಿಯಿಂದ ಪದವಿ ವಿದ್ಯಾರ್ಥಿಗಳಿಗೆ "ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆ" ಕುರಿತ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಕಾಶಿನಾಥ ಪಾಟೀಲ ಅವರು ಸಸಿಗೆ ನೀರು ಹಾಯಿಸುವುದರೊಂದಿಗೆ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅವರು ಹವಾಮಾನ ವೈಪರೀತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ, ಪ್ರತಿಯೊಬ್ಬರೂ ತಮ್ಮ ಹುಟ್ಟುಹಬ್ಬದಂದು ನಾಲ್ಕು ಸಸಿಗಳನ್ನು ನೆಡಬೇಕು ಎಂಬ ಸಂದೇಶ ನೀಡಿದರು.

ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿದ ಡಾ. ನಾಗವೇಣಿ ಅಸಪಲ್ಲಿ (ರಾಜ್ಯ ಪ್ರಶಸ್ತಿ ಪುರಸ್ಕೃತರು) ಗಿಡ ನೆಡುವ ಹೊಸ ತಂತ್ರಜ್ಞಾನ ಕುರಿತು ಪ್ರಬಂಧ ಮಂಡಿಸಿದರು. " Seed Boll Technology " ಮೂಲಕ ಒಂದೂವರೆ ಗಂಟೆಯಲ್ಲಿ 375 ಸಸಿಗಳನ್ನು ನೆಡಿದ ಅನುಭವವನ್ನು ಹಂಚಿಕೊಂಡ ಅವರು, ಕಳೆದ ಎರಡು ವರ್ಷಗಳಲ್ಲಿ 66,000 ಗಿಡಗಳನ್ನು ಬೆಳೆಸಿರುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ರಂಜನಾ ಪಾಟೀಲ ವಹಿಸಿಕೊಂಡು, "ಪ್ಲಾಸ್ಟಿಕ್ ಮುಕ್ತ ಸಮಾಜವನ್ನು ನಿರ್ಮಿಸಬೇಕಾಗಿದೆ" ಎಂದು ಒತ್ತಿಹೇಳಿದರು. ಗೌರವಾಧ್ಯಕ್ಷತೆಯನ್ನು ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಗಂಗಾಂಬಿಕಾ ಪಾಟೀಲ ವಹಿಸಿಕೊಂಡರು. ಮುಖ್ಯ ಅತಿಥಿಗಳಾಗಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಮೀನಾ ಗಾಯಕವಾಡ ಮತ್ತು ಆರ್. ಎಸ್. ಬಿರಾದರ್ ಅವರು ವಿದ್ಯಾರ್ಥಿಗಳಿಗೆ ವೃತ್ತಿಪರ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮವನ್ನು ವಿದ್ಯಾರ್ಥಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕು. ಅಂಜಲಿ ನಿರ್ವಹಿಸಿದರು. ಸ್ವಾಗತವನ್ನು ಆಂಗ್ಲ ವಿಭಾಗದ ಮುಖ್ಯಸ್ಥ ಡಾ. ಪ್ರವೀಣಕುಮಾರ ಸಲ್ಲಿಸಿದರು. ವಂದನಾರ್ಪಣೆಯನ್ನು ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ದೇವರಾಜ ಮಾಡಿದರು. ಅಂತಿಮ ವರ್ಷದ ವಿದ್ಯಾರ್ಥಿನಿ ಶ್ರೇಯಾ ಕಾರ್ಯಕ್ರಮವನ್ನು ನಿರೂಪಿಸಿದರು

## ಸಾಲಬಾಧೆ: ರೈತ ಆತ್ಮಹತ್ಯೆ




**ಕಲಬುರಗಿ,ಆ.21–**ಸಾಲಬಾಧೆ ತಾಳದೆ ನೇಣು ಹಾಕಿಕೊಂಡು ರೈತ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೌಲಗಾ (ಬಿ) ಗ್ರಾಮದಲ್ಲಿ ನಡೆದಿದೆ.ಹಣಮಂತ ತಂದೆ ಬಸವರಾಜ ಮೊಸಂಡಿ (35) ಆತ್ಮಹತ್ಯೆ ಮಾಡಿಕೊಂಡಿರುವ ರೈತ.

ಹೊಲದಲ್ಲಿರುವ ಬಾವಿಯ ದಂಡಿ ಮೇಲೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, 3 ಎಕರೆ ಜಮೀನು ಇದೆ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ 2 ಲಕ್ಷ ಮತ್ತು ಖಾಸಗಿಯಾಗಿ 3.50 ಲಕ್ಷ ಸಾಲವಾಗಿತ್ತು ಎಂದು ತಿಳಿದುಬಂದಿದೆ. ಮೃತ ರೈತನಿಗೆ ಪತ್ನಿ ಮತ್ತು ಒಬ್ಬ ಪುತ್ರ ಇದ್ದಾನೆ ಎಂದು ತಿಳಿದುಬಂದಿದ್ದು, ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಪರಿಹಾರಕ್ಕೆ ಆಗ್ರಹ:** ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಕೌಲಗಾ (ಬಿ) ಗ್ರಾಮದ ರೈತ ಹಣಮಂತ ಮೊಸಂಡಿ ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು, ಸಾಲ ಋಣ ಮುಕ್ತ ಕಾಯ್ದೆ ಜಾರಿಗೆ ತರಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಆಗ್ರಹಿಸಿದ್ದಾರೆ.

## ಕಂಪ್ಯೂಟರ್ ಟ್ಯಾಲಿ, ಕುರಿ ಸಾಕಣೆ ತರಬೇತಿಗೆ ಅರ್ಜಿ ಆಹ್ವಾನ

**ರಾಯಚೂರು,ಆ.21–** ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರಿಂದ ಗ್ರಾಮೀಣ ನಿರುದ್ಯೋಗಿ ಯುವಕರಿಗಾಗಿ ಕಂಪ್ಯೂಟರ್ ಟ್ಯಾಲಿ, ಕುರಿ ಸಾಕಣೆಕೆ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರ ಅಭ್ಯರ್ಥಿಗಳು ಕನಿಷ್ಠ 8ನೇ ತರಗತಿ ವ್ಯಾಸಂಗ ಮಾಡಿರುವ 18ರಿಂದ 50 ವರ್ಷದೊಳಗಿನ ವಯಸ್ಸು ಹೊಂದಿರುವ ಗ್ರಾಮೀಣ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಕಂಪ್ಯೂಟರ್ ಟ್ಯಾಲಿಯು 38 ದಿನಗಳ ಕಾಲ ತರಬೇತಿಯನ್ನು ನೀಡಲಾಗುತ್ತಿದೆ. ಹಾಗೂ ಕುರಿ ಸಾಕಣೆ 13 ದಿನಗಳ ಕಾಲ ತರಬೇತಿಗೆ ಸೆಪ್ಟೆಂಬರ್ 2ರೊಳಗಾಗಿ ಆಧಾರ್ ಕಾರ್ಡ್ ಜೆರಾಕ್ಸ್, ಗ್ರಾಮೀಣ ಪಡಿತರ ಚೀಟಿ, 4ಫೋಟೋಗಳು, ಬ್ಯಾಂಕ್ ಪಾಸ್ಬುಕ್ ಜೆರಾಕ್ಸ್, ಪ್ಯಾನ್ ಕಾರ್ಡ್ ಜೆರಾಕ್ಸ್ನೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ. ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಮೊಬೈಲ್ ಸಂಖ್ಯೆ: 9742470999, 9110448595, 7899396138ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಯಲು ಜಾಗದಲ್ಲಿ ನವಜಾತ ಗಂಡು ಮೃತ ಶಿಶು ಪತ್ತೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಆ.21–**ಪಟ್ಟಣದ 19 ನೇ ವಾರ್ಡಿನ ಶ್ರೀ ಚೌಡೇಶ್ವರಿ ದೇವಸ್ಥಾನದ ಹತ್ತಿರದ ಬಯಲು ಜಾಗದಲ್ಲಿ ಬುಧುವಾರ ಮಧ್ಯಾಹ್ನ ನವಜಾತ ಗಂಡು ಶಿಶು ಇರುವುದನ್ನು ನೋಡಿದ ಕೇಲ ಸ್ಥಳಿಯರು ಕೂಡಲೇ ಪುರಸಭೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ, ಕೂಡಲೇ ಪುರಸಭೆ ಆರೋಗ್ಯ ನಿರೀಕ್ಷಕ ಮಹೇಶ ಕುಮಾರ ನವಜಾತ ಶಿಶುವನ್ನು ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಿಸಿದು ಮಗು ಮೃತಪಟ್ಟಿರುವುದಾಗಿ ತಿಳಿದು ಬಂದಿದೆ ಮಾನ್ವಿ ಪೊಲೀಸ್ ಅಧಿಕಾರಿಗಳು ನವಜಾತ ಶಿಶುವಿನ ಪಾಲಕರ ಪತ್ತೆಗಾಗಿ ತನಿಖೆ ಕೈಗೊಂಡಿದ್ದಾರೆ.

## ಸಿರವಾರ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದ ಸ್ಥಳ ಬದಲಾವಣೆ

**ರಾಯಚೂರು,ಆ.21–**ಇಲ್ಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2025–26ನೇ ಸಾಲಿನ ಸಿರವಾರ ತಾಲೂಕ ಮಟ್ಟದ ದಸರಾ ಕ್ರೀಡಾಕೂಟವನ್ನು ಆಗಸ್ಟ್ 24ರಂದು ಹೋಲಿ ಕ್ರಾಸ್ ಪ್ರೌಢ ಶಾಲೆ ಆಯೋಜಿಸಲು ಈಗಾಗಲೇ ತೀರ್ಮಾನಿಸಲಾಗಿತ್ತು. ಆದರೆ ಅನಿವಾರ್ಯ ಕಾರಣಾಂತರಗಳಿಂದ ಸ್ಥಳ ಬದಲಾವಣೆಯನ್ನು ಮಾಡಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ನೂತನ ಸ್ಥಳವನ್ನು ದೇವದುರ್ಗ ರೋಡ್ ಸಿರವಾರದ ಸಂದೀಪನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದು, ಸಿರವಾರ ತಾಲ್ಲೂಕು ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ದಸರಾ ಕ್ರೀಡಾಕೂಟಕ್ಕೆ ಭಾಗವಹಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕು. ಸ್ಥಳ ಬದಲಾವಣೆಗೆ ಸಹಕರಿಸುವಂತೆ ಕೋರಲಾಗಿದೆ.ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆಯ ಜಿಲ್ಲಾ ಕಚೇರಿ ಮಹಾತ್ಮಗಾಂಧಿ ಜಿಲ್ಲಾ ಅಥವಾ ಶೀ ಮೆಹಬೂಬ್ ಪಾಷಾ ಮೊಬೈಲ್ ಸಂಖ್ಯೆ: 9980472040ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ವೆ ನಂಬರ್ 264/1/11ರಲ್ಲಿ 01ಎಕರೆ ಮತ್ತು 264/1/12ರಲ್ಲಿ 01ಎಕರೆ ಸೇರಿದಂತೆ ಒಟ್ಟು 02 ಎಕರೆ ವಿಸ್ತೀರ್ಣ ಅನುಮೋದಿತ ವಿನ್ಯಾಸದಲ್ಲಿ ಕಾಯ್ದಿರಿಸಿದ ನಾಗರೀಕ ಸೌಲಭ್ಯವನ್ನು ಹಂಚಿಕೆ ನೀಡಲು ಮಾನವಿ ತಾಲೂಕು ಆರೋಗ್ಯ ಅಧಿಕಾರಿಗಳು ಕೋರಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆ ಅರ್ಜಿ ಆಹ್ವಾನಿಸಲಾಗಿದೆ.ಸಾರ್ವಜನಿಕರು ಈ ಸಂಬಂಧ ಯಾವುದೇ ತರಹದ ತಕರಾರು ಆಕ್ಷೇಪಣೆ ಹಾಗೂ ಸಲಹೆಗಳು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 16 ದಿವಸದೊಳಗೆ ನಗರ ಯೋಜನಾ ಪ್ರಾಧಿಕಾರದ ಕಾರ್ಯಾಲಯಕ್ಕೆ ಲಿಖಿತ ಮೂಲಕ ಅಥವಾ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಪ ಲೋಕಾಯುಕ್ತ ಬಿ.ವೀರಪ್ಪ ಅವರ ರಾಯಚೂರು ಜಿಲ್ಲಾ ಪ್ರವಾಸ: ಮತ್ತೊಂದು ಸುತ್ತಿನ ಸಿದ್ಧತಾ ಸಭೆ





ಯುವ ಮಾರ್ಗ ಸುದ್ದಿ

**ರಾಯಚೂರು,ಆ.21–** ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ಆಗಸ್ಟ್ 28 ರಿಂದ 30 ರವರೆಗೆ ರಾಯಚೂರ ಜಿಲ್ಲೆಯಲ್ಲಿಯಲ್ಲಿ ಪ್ರವಾಸ ಕೈಗೊಂಡ ಹಿನ್ನೆಲೆಯಲ್ಲಿ ಸಿದ್ಧತೆಗಾಗಿ ಮತ್ತೊಂದು ಸುತ್ತಿನ ಪೂರ್ವಭಾವಿ ಸಿದ್ಧತಾ ಸಭೆಯು ಆಗಸ್ಟ್ 20ರಂದು ಸಂಜೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಿತು.

ರಾಯಚೂರಿನ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ ಅವರ ಸಮ್ಮುಖದಲ್ಲಿ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು, ಮಾನ್ಯ ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತರ ಪ್ರವಾಸಕ್ಕೆ ಕೆಲವೇ ದಿನಗಳ ಬಾಕಿ ಇದೆ. ಈ ಹಿಂದೆ ಉಪ ಲೋಕಾಯುಕ್ತರು ಖುದ್ದು ವಿಡಿಯೋ ಕಾನ್ಫರೆನ್ಸ್ ನಡೆಸಿ ನೀಡಿದ ಸೂಚನೆಯಂತೆ ಜಿಲ್ಲೆಯಲ್ಲಿ ಸಿದ್ಧತಾ ಕಾರ್ಯಗಳು ಆಗಬೇಕು ಎಂದು ತಿಳಿಸಿದರು.

ಗೌರವಾನ್ವಿತ ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ತನಿಖೆ ಅಥವಾ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳ ಬಗ್ಗೆ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿಉಪಲೋಕಾಯುಕ್ತರು ವಿಚಾರಣೆ ನಡೆಸಲಿದ್ದು, ಆಯಾ ಇಲಾಖೆಯ ಅಧಿಕಾರಿಗಳು, ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ತನಿಖೆ ಅಥವಾ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳ ಬಗ್ಗೆ ವಿಶೇಷ ಗಮನ ಹರಿಸಿ ವಿಚಾರಣೆಗೆ ಹಾಜರಾಗಬೇಕು ಎಂದು ತಿಳಿಸಿದರು.

ಆಗಸ್ಟ್ 29ರಂದು, ನಗರದ ಕೃಷಿ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ಉಪ ಲೋಕಾಯುಕ್ತರು ಜಿಲ್ಲಾ ಶಿಬಿರ ಕೈಗೊಂಡಿದ್ದು, ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ವೇಳೆ, ಅಗತ್ಯ ಸಂದರ್ಭದಲ್ಲಿ ಅಧಿಕಾರಿಗಳು ಸಹ ಮಾಹಿತಿಯೊಂದಿಗೆ ಹಾಜರಿರಬೇಕು ಎಂದು ತಿಳಿಸಿದರು.

ಕಾನೂನು ರೀತ್ಯಾ ಆಗಬೇಕಾದ ಕೆಲಸ ಮಾಡುವಲ್ಲಿ ಅನಗತ್ಯ ವಿಳಂಬ ಮಾಡಬಾರದು. ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುವುದು ಅಥವಾ ಇನ್ಯಾವುದೇ ತರಹದ ಭ್ರಷ್ಟಾಚಾರ ಮತ್ತು ದುರಾಡಳಿತದಲ್ಲಿ ತೊಡಗಿದರೆ ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ಶಿಸ್ತು ಕ್ರಮವಾಗಲಿದೆ. ಸರ್ಕಾರಿ ಅಧಿಕಾರಿ ಅಥವಾ ನೌಕರರಿಂದ ತಮಗೆ ತೊಂದರೆಯಾಗುತ್ತದೆ ಎಂದು ಯಾರು ಸಹ ದೂರು ನೀಡದ ಹಾಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾಳಜಿ ವಹಿಸಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.ಮಾನ್ಯ ಉಪ ಲೋಕಾಯುಕ್ತರ ಕಾರ್ಯಕ್ರಮ ಹಿನ್ನೆಲೆಯಲ್ಲಿ ಕೃಷಿ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹವನ್ನು ಕಾಯ್ದಿರಿಸಿ ಅಗತ್ಯ ಏರ್ಪಾಡು ಮಾಡುವಂತೆ ಇದೆ ವೇಳೆ ಅಪರ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ರಾಯಚೂರಿನ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ತಹಸೀಲ್ದಾರ ಸುರೇಶ ವರ್ಮಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಒಳಮೀಸಲಾತಿ ಜಾರಿಗಾಗಿ ಹೋರಾಡಿದ ಭೀಮಾ ಸೈನಿಕರಿಗೆ ಸಿರವಾರದಲ್ಲಿ ಅದ್ದೂರಿ ಸ್ವಾಗತ, ಸನ್ಮಾನ



ಯುವ ಮಾರ್ಗ ಸುದ್ದಿ

**ಸಿರವಾರ, ಆ.21–**ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗಾಗಿ ಕಳೆದ ಆಗಸ್ಟ್ 11 ರಿಂದ ಬೆಂಗಳೂರು ಫ್ರೀಡಂ ಪಾರ್ಕ್ ನಲ್ಲಿ ನಡೆಯುತ್ತಿದ್ದ ಅಹೋರಾತ್ರಿ ಸತ್ಯಾಗ್ರಹದಲ್ಲಿ ಹಗಲು ರಾತ್ರಿ ಹೋರಾಟದಲ್ಲಿ ಭಾಗಿಯಾಗಿ ಮಾದಿಗ ಸಮುದಾಯದ ಒಳಮೀಸಲಾತಿ ಜಾರಿಗೆ ಯಶಸ್ವಿಗೆ ಕಾರಣರಾದ ಹೋರಾಟಗಾರರು ಇಂಥು ಸಿರವಾರ ಪಟ್ಟಣಕ್ಕೆ ಆಗಮಿಸುತ್ತಿದ್ದಂತೆ ಸಮುದಾಯದ ಹಿರಿಯ ಮುಖಂಡರು, ಯುವಕರು ಪಟಾಕಿ ಸಿಡಿಸಿ ಹೋರಾಟಗಾರರಿಗೆ ಸನ್ಮಾನಿಸುವ ಮೂಲಕ ಸ್ವಗ್ರಾಮಕ್ಕೆ ಅದ್ದೂರಿಯಾಗಿ ವರಮಾಡಿಕೊಂಡರು.

ಮೊದಲಿಗೆ ಸಿರವಾರ ಬಸ್ ನಿಲ್ದಾಣದ ಮುಂದಿನ ಮುಖ್ಯ ರಸ್ತೆಯಲ್ಲಿರುವ ಹಸಿರು ಕ್ರಾಂತಿ ಹರಿಕಾರ ಡಾ:ಬಾಬು ಜಗಜೀವನರಾಮ್ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು, ನಂತರ ಸಂವಿಧಾನ ಶಿಲ್ಪಿ ಡಾ: ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಜೆ.ಅಬ್ರಹಾಂ ಹೊನ್ನಟಿಗಿ ಅವರು ಮಾದಿಗ ಸಮಾಜದ ಮೂರು ದಶಕಗಳ ಹೋರಾಟಕ್ಕೆ ಜಯ ಸಿಕ್ಕಿದೆ ಈ ಮೀಸಲಾತಿ ಪಡೆಯಲು ಹೋರಾಟಗಾರರು ಪೊಲೀಸರಿಂದ ಲಾಠಿ ಏಟು ತಿಂದಿದ್ದೇವೆ, ಅನೇಕರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ ಅಂತಹ ಎಲ್ಲಾ ಹೋರಾಟಗಾರರಿಗೆ ನಾವು ಸ್ಮರಿಸಬೇಕು ನಮ್ಮ ಹೋರಾಟಕ್ಕೆ ಸಮುದಾಯದ ಹಿರಿಯ ಮುಖಂಡರು, ಯುವಕರು ಬೆಂಬಲವಾಗಿ ನಿಂತು ಸಹಾಯ, ಸಹಕಾರ ನೀಡಿದ್ದರಿಂದ ನಾವು ಈ ಮಟ್ಟಿಗೆ ಹೋರಾಟದಲ್ಲಿ ತೊಡಗಲು ಕಾರಣವಾಗಿದೆ ಇನ್ನೂ ನಮ್ಮ ಸಮುದಾಯದ ಯುವ ಪೀಳಿಗೆ ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸಬೇಕು ಆ ಮೂಲಜ ಸಮ್ಮ ಸಮಾಜವನ್ನು ಮುಖ್ಯವಾಹಿನಿಗೆ ತಂದು ಅಭಿವೃದ್ಧಿಯ ಕಡೆ ಕೊಂಡೊಯ್ಯಬೇಕು ಎಂದು ಯುವಕರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಮುದಾಯದ ಹಿರಿಯ ಮುಖಂಡರಾದ ರಾಜಪ್ಪ ಹೊನ್ನಟಿಗಿ, ಬಡ್ಡ ಹನುಮಂತ, ದಾನೇಲಪ್ಪ ಕೆಂಪು, ಎಂ.ಪ್ರಕಾಶಪ್ಪ, ಸವಾರೆಪ್ಪ, ಸಾಮೇಲಪ್ಪ, ಇಮಾನುವೇಲ್, ಎನ್.ಮಲ್ಲಪ್ಪ, ಗ್ಯಾನಪ್ಪ, ದೇವಪ್ಪ ಕೆಂಪು, ಹಂಪಯ್ಯ ಕವಿತಾಳ, ಅಜೀತಕುಮಾರ ಹೊನ್ನಟಿಗಿ, ಹೆಚ್.ಮಾರ್ಕಪ್ಪ, ಡಿ.ಜಯಪ್ಪ, ಹುಲಿಗೆಪ್ಪ ಕರಿಬಿಲ್ಕರ್, ನದೀಮ್ ಸಾಬ, ಯೇಸುಮಿತ್ರ, ಮೈಕಲ್, ಶಾಂತಪ್ಪ, ಭಾಸ್ಕರ್ ಸೇರಿದಂತೆ ಸಮುದಾಯದ ಮುಖಂಡರು, ಯುವಕರು ಇದ್ದರು.

# ಜೆಸ್ಕಾಂನಿಂದ ನಗರದ ವಿವಿಧೆಡೆ ಆಗಸ್ಟ್ 22ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಆ.21–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–01ರ ವ್ಯಾಪ್ತಿಯ 11 ಕೆವಿಯಲ್ಲಿ ಗಣೇಶ ಹಬ್ಬದ ಮೆರವಣಿಗೆ ಮತ್ತು ಈದ್ ಮಿಲಾದ್ ಹಬ್ಬದ ಪ್ರಯುಕ್ತ ಮಾರ್ಗ ಹಾಗೂ ವಿದ್ಯುತ್ ಪರಿವರ್ತಕ ದುರಸ್ತಿ ಕಾಮಗಾರಿ ಮತ್ತು ಹೊಸ ಲಿಂಕ್ ಲೈನ್ ನಿರ್ವಹಣೆ ಹಿನ್ನಲ್ಲೆಯಲ್ಲಿ ಆಗಸ್ಟ್ 22ರ ಬೆಳಿಗ್ಗ 09 ಗಂಟೆಯಿಂದ ಸಂಜೆ 05 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ರಿಲಯನ್ಸ್ ಮಾರ್ಟ್, ಎಲ್.ಐ.ಸಿ ಆಫೀಸ್, ಸ್ಟೇಡಿಯಂ, ಅಂಬೇಡ್ಕರ್ ಸರ್ಕಲ್, ಬಸ್ ಸ್ಟಾಂಡ್, ಹೆಡ್ ಪೋಸ್ಟ್ ಆಫೀಸ್, ಅಶೋಕ್ ಡಿಪೋ, ತಿನ್ಕಂದಿಲ್, ಕಮೇಲ್, ಪರಕೋಟ, ಗಂಗಾನಿವಾಸ್, ಗಣೇಶಕಟ್ಟ, ಜೈನ್ ಮಂದಿರ, ಕೋಟೆ, ಏಕ್ ಮಿನಾರ್, ಕಿಲ್ಲರ್ ಮಠ, ಡಿ.ಹೆಚ್.ಓಆಫೀಸ್, ತಹಸಿಲ್ ಆಫೀಸ್, ತಾಲೂಕು ಪಂಚಾಯಿತಿ ಆಫೀಸ್, ಜೈಲ್, ಆಂದ್ರೂನ್ ಕಿಲ್ಲಾ, ಬೇರೂಮ್ ಕಿಲ್ಲಾ, ಜಾಕೀರ್ ಹುಸೇನ್ ಸರ್ಕಲ್, ನವರಂಗ್ ದರ್ವಾಜ, ಮಂಗಳವಾರ ಪೇಟ, ಸದರ್ ಬಜಾರ್ ಪೋಲಿಸ್ ಸ್ಟೇಷನ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

## ರಾಯಚೂರಿನಲ್ಲಿ ಉಪ ಲೋಕಾಯುಕ್ತರ ಪ್ರವಾಸ ನಿಗದಿ

**ರಾಯಚೂರು,ಆ.21–** ಜಿಲ್ಲೆಗೆ ಆಗಸ್ಟ್ 28ರಿಂದ ಆಗಸ್ಟ್ 30ರವರೆಗೆ ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ಪ್ರವಾಸ ಕೈಗೊಂಡ ಹಿನ್ನೆಲೆಯಲ್ಲಿ ಕಾರ್ಯಕ್ರಮವು ಸಕಾಲಕ್ಕೆ ಶಿಸ್ತಿನಿಂದ ಹಾಗೂ ಯಶಸ್ವಿಯಾಗಿ ನಡೆಸಲು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ನಾನಾ ಸಮಿತಿಗಳನ್ನು ರಚಿಸಿ ಕಾರ್ಯ ಹಂಚಿಕೆ ಮಾಡಿದ್ದಾರೆ.

ಮಾನ್ಯ ಉಪ ಲೋಕಾಯುಕ್ತರು ನಗರದ ಕೃಷಿ ವಿಶ್ವ ವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಆಡಿಟೋರಿಯಂ ಹಾಲನಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ, ವಿಚಾರಣೆ ನಡೆಸುವುದರ ಜೊತೆಗೆ ರಾಯಚೂರು ಜಿಲ್ಲೆಗೆ ಸಂಬಂಧಪಟ್ಟು ಈ ಮೊದಲು ಸ್ವೀಕೃತವಾದ ಅರ್ಜಿಗಳನ್ನು ವಿಚಾರಣೆ ಕೈಗೊಂಡು, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ವಿಲೇವಾರಿ ಕುರಿತು ಕ್ರಮ ಕೈಗೊಳ್ಳಲಿದ್ದಾರೆ.

ಈ ಕಾರ್ಯಕ್ರಮವು ಶಿಸ್ತಿನಿಂದ ಹಾಗೂ ಯಶಸ್ವಿಯಾಗಿ ನಡೆಸಲು ರಾಯಚೂರು ಸಹಾಯಕ ಆಯುಕ್ತರ ಮೇಲುಸ್ತುವಾರಿಯಲ್ಲಿ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯೊಳಗೊಂಡು

ವಿವಿಧ ಸಮಿತಿಗಳನ್ನು ರಚಿಸಿ ಜಿಲ್ಲಾಧಿಕಾರಿಗಳು ಅಧೀಕೃತ ಜ್ಞಾಪನಾ ಪತ್ರ ಹೊರಡಿಸಿದ್ದಾರೆ.

ಸ್ವಾಗತ ಸಮಿತಿ, ವೇದಿಕೆಗೆ ಪುಷ್ಪಾಲಂಕಾರದ ಹಾಗೂ ಫಾಟ್ ವ್ಯವಸ್ಥೆ ಸಮಿತಿ, ವಾಹನ ವ್ಯವಸ್ಥೆ ಸಮಿತಿ, ವಸತಿ ಸಮಿತಿ., ಆಹಾರ, ಕುಡಿಯುವ ನೀರು ಮತ್ತು ವಿಶ್ರಾಂತಿ ವ್ಯವಸ್ಥೆ ಸಮಿತಿ, ಪ್ರಚಾರ ಸಮಿತಿ,

ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ ಸಭೆಗೆ ಆಹ್ವಾನಿಸುವುದು, ಸ್ಟೇಷನರಿ, ಗಣಕಯಂತ್ರ, ಪ್ರಿಂಟರ್ಸ್ ಸೌಲಭ್ಯ ವ್ಯವಸ್ಥೆ ಸಮಿತಿ, ಸಾರ್ವಜನಿಕ ಅಹವಾಲು ಸ್ವೀಕೃತಿ ಸಮಿತಿ, ಕಾರ್ಯಕ್ರಮಗಳ ನಿರ್ವಹಣೆಯ ಕುರಿತು ಪರಿಶೀಲನಾ ಸಮಿತಿ, ವಿಡಿಯೋ ಚಿತ್ರೀಕರಣ ಸಮಿತಿ, ಕಾನೂನು ಸೇವಾ ಪ್ರಾಧಿಕಾರದ ಸಮಿತಿ, ಪತ್ರಿಕಾ ಮತ್ತು ಮಾಧ್ಯಮ ನಿರ್ವಹಣಾ ಸಮಿತಿ, ವೈದ್ಯಕೀಯ ಮತ್ತು ತುರ್ತು ಸೇವಾ ಸಮಿತಿ ಹಾಗೂ ಕಾನೂನು ವ್ಯವಸ್ಥೆ ಸೇರಿದಂತೆ ಒಟ್ಟು 16 ಸಮಿತಿಗಳನ್ನು ರಚಿಸಿ ನಾನಾ ಕಾರ್ಯ ಹಂಚಿಕೆ ಮಾಡಲಾಗಿದೆ.

## ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

**ರಾಯಚೂರು,ಆ.21–** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನ ವಿವಿಧ ಯೋಜನೆಗಳಿಗೆ ಅರ್ಹ ಪರಿಶಿಷ್ಟ ಪಂಗಡದ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ನಿಗಮದಿಂದ ಸ್ವಯಂ ಉದ್ಯೋಗ ಕಾರ್ಯಕ್ರಮಗಳಾದ ಸ್ವಯಂ ಉದ್ಯೋಗ–ನೇರಸಾಲ ಯೋಜನೆ, ಕಿರು ಆರ್ಥಿಕ ಚಟುವಟಿಕೆ ಚಟುವಟಿಕೆ, ಸ್ವಯಂ ಉದ್ಯೋಗ–ಹೈನುಗಾರಿಕೆ, ಸ್ವಯಂ ಉದ್ಯೋಗ– ಸ್ವಾವಲಂಬಿ ಸಾರಥಿ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಆಸಕ್ತರು ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್‌ಗಳಲ್ಲಿ ಸೇವಾ ಸಿಂಧು ವೆಬ್‌ಸೈಟ್ ವಿಳಾಸ: http://Sevasindhu.karnataka.gov.in ನಲ್ಲಿ ಸೆಪ್ಟೆಂಬರ್ 17ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

2023–24 ಮತ್ತು 2024–25ನೇ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ವಿಶೇಷ ಸೂಚನೆ: ನಿಗಮದ ನಿರ್ದೇಶಕ ಮಂಡಳಿ ವಿವೇಚನಾ ಕೋಟ ಮತ್ತು ಸರ್ಕಾರದ ಸಾಂಸ್ಥಿಕ ಕೋಟಾದಡಿ ಸಲ್ಲಿಸುವ ಅರ್ಜಿಗಳನ್ನು ಸಹ ಸೇವಾ ಸಿಂಧು ಪೋರ್ಟಲ್ ಮೂಲಕವೇ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಲಾ ಮಕ್ಕಳಿಗೆ ನೋಟ್ ಬುಕ್, ಅಂಕಲಿಪಿ ವಿತರಣೆ



ಕೆ.ಭಗವಂತ್ರಾಯ ನಾಯಕ ಹುಟ್ಟು ಹಬ್ಬದ ಅಂಗವಾಗಿ ಅಭಿಮಾನಿಗಳಿಂದ ಸಾಮಾಜಿಕ ಕಾರ್ಯ.

ಯುವ ಮಾರ್ಗ ಸುದ್ದಿ

**ಅರಕೇರಾ,ಆ.21–** ಸಮೀಪದ ಪಾತರಗುಡ್ಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕೆ.ಭಗವಂತ್ರಾಯ ನಾಯಕ ಅಭಿಮಾನಿ ಬಳಗದಿಂದ ನೋಟ್ ಬುಕ್, ಅಂಕಲಿಪಿ ಗುರುವಾರ ವಿತರಿಸಲಾಯಿತು. ಎಸ್ಡಿಎಂಸಿ ಅಧ್ಯಕ್ಷ ಭಗಯ್ಯ ನಾಯಕ ಜಲ್ಲೆ, ಪ್ರಮುಖರಾದ ಸುನೀಲ್ ನಾಯಕ, ಬಸವರಾಜ ನಾಯಕ, ಎ.ವಿಶ್ವನಾಥ, ಯಲ್ಲಪ್ಪ ನಾಯಕ ಇತರರಿದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H